ಅಧ್ಯಾತ್ಮಗ್ರಂಥಾವಳಿ

# ವಾಕ್ಯವೃತ್ತಿ
## ಮತ್ತು
# ಲಘುವಾಕ್ಯವೃತ್ತಿ

(ಮೂಲ, ಅನುವಾದ, ಟಿಪ್ಪಣಿ, ಪರಿಶಿಷ್ಟಗಳ ಸಮೇತ)

ಸಂಸ್ಕರಿಸಿದವರು :
**ವೈ. ಸುಬ್ಬರಾವ್**
(ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಪೂರ್ವಾಶ್ರಮದ ಹೆಸರು)

ಕ್ರಮಾಂಕ : ೫೭

ಪ್ರಕಾಶಕರು :
**ಅಧ್ಯಾತ್ಮ ಪ್ರಕಾಶಕಾರ್ಯಾಲಯ**
ಹೊಳೆನರಸೀಪುರ
2000

# ಮುನ್ನುಡಿ

ಶ್ರೀ ಶಂಕರಾಚಾರ್ಯರ ಕೃತಿಗಳೆಂದು ಪ್ರಸಿದ್ಧವಾಗಿರುವ **ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ** ಎಂಬ ಎರಡು ಚಿಕ್ಕ ಪ್ರಕರಣಗಳನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ವೈ. ಸುಬ್ಬರಾವ್) ತಮ್ಮ ಪೂರ್ವಾಶ್ರಮದಲ್ಲಿ 1937ರಲ್ಲಿ ಪ್ರಕಟಿಸಿದ್ದ ಗ್ರಂಥವನ್ನೇ ಈಗ ಎರಡನೆಯ ಬಾರಿಗೆ ಅಚ್ಚುಮಾಡಿ ವಾಚಕರಿಗೆ ಅರ್ಪಿಸಲಾಗಿದೆ. ಪೂಜ್ಯ ಶ್ರೀಶ್ರೀಗಳವರ ಬರವಣಿಗೆಗಳಾವುವೂ ಪ್ರಕಟವಾಗದೆ ಉಳಿಯಬಾರದೆಂಬ ಉದ್ದೇಶದಿಂದ ಕಾರ್ಯಾಲಯವು ಈ ಪ್ರಕಟನೆಯನ್ನು ಈಗ ಹೊರತಂದಿರುತ್ತದೆ. ವಿಚಾರಶೀಲರಾದ ಜಿಜ್ಞಾಸುಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ಪ್ರಾರ್ಥನೆ.

**ವಿಕ್ರಮಸಂವತ್ಸರ, ಮಾರ್ಗಶಿರ**
**ಬಹುಳ ಅಷ್ಟಮಿ**
**ತಾ|| 18. 12. 2000**

ಇತಿ
**ಪ್ರಕಾಶಕರು**

# ಪೀಠಿಕೆ

ಇಲ್ಲಿ ಕೊಟ್ಟಿರುವ **ವಾಕ್ಯವೃತ್ತಿ, ಲಘುವಾಕ್ಯವೃತ್ತಿ**- ಎಂಬ ಎರಡು ಪ್ರಕರಣಗಳೂ ಶ್ರೀಶಂಕರಾಚಾರ್ಯರವರ ಕೃತಿಗಳೆಂದು ಪ್ರಸಿದ್ಧವಾಗಿವೆ. ಇವೆರಡರಲ್ಲಿಯೂ ಮಹಾವಾಕ್ಯದ ಅರ್ಥವನ್ನು ಹೇಗೆ ತಿಳಿದುಕೊಳ್ಳ ಬೇಕೆಂಬುದನ್ನು ತಿಳಿಸಿರುತ್ತದೆ.

ವಾಕ್ಯವೃತ್ತಿಯ ಶ್ಲೋಕಗಳನ್ನು ಸದಾನಂದರು ಬರೆದಿರುವ **'ವೇದಾಂತಸಾರ'** ವೆಂಬ ಗ್ರಂಥದಲ್ಲಿಯೂ ಶ್ರೀವಿದ್ಯಾರಣ್ಯವಿರಚಿತವೆಂದು ಪ್ರಸಿದ್ಧವಾಗಿರುವ **'ಪಂಚದಶಿ'**ಯಲ್ಲಿಯೂ ಪ್ರಮಾಣವಾಗಿ ಉದಾಹರಿಸಿರು ವದು ಕಂಡುಬರುತ್ತದೆ, ವೇದಾಂತಸಾರದಲ್ಲಿ ಪಂಚದಶಿಯ ವಾಕ್ಯಗಳನ್ನೂ ಪ್ರಮಾಣವಾಗಿ ಕೊಟ್ಟಿರುವದರಿಂದ ಆ ಗ್ರಂಥವು ಬಹಳ ಆಧುನಿಕವಾಗಿರ ಬೇಕೆಂದು ಸ್ಪಷ್ಟವಾಗುತ್ತದೆ. ವಾಕ್ಯವೃತ್ತಿಯು ಶ್ರೀಶಂಕರ ಭಗವತ್ಪಾದರ ಕೃತಿಯೇ ಎಂದು ಡಾ|| ಹಾಲ್ (Dr.Hall) ಎಂಬವರು ಅಭಿಪ್ರಾಯಪಟ್ಟಿರುವ ದಾಗಿಯೂ ಆ ಬಗ್ಗೆ ಸಂದೇಹವಿದೆಯೆಂದು ಡಾ|| ಬರ್ನೆಲ್ (Dr. Burnell) ಎಂಬವರು ಸೂಚಿಸಿರುವದಾಗಿಯೂ ಬೊಂಬಾಯಿಯ ನಿರ್ಣಯಸಾಗರ ಮುದ್ರಣಾಲಯದಲ್ಲಿ ಪ್ರಕಟಿತವಾಗಿರುವ ವೇದಾಂತಸಾರದಲ್ಲಿ ಕರ್ನಲ್ ಜೇಕಬ್ (Col. Jacob) ಎಂಬವರು ಬರೆದಿರುತ್ತಾರೆ.

ಪಂಚದಶಿಯ ತೃಪ್ತಿದೀಪದಲ್ಲಿ **''ಬ್ರಹ್ಮಾಪರೋಕ್ಷ್ಯಸಿದ್ಧ್ಯರ್ಥಂ ಮಹಾವಾಕ್ಯಮಿತೀರಿತಮ್ । ವಾಕ್ಯವೃತ್ತಾವತೋ ಬ್ರಹ್ಮಾಪರೋಕ್ಷ್ಯೇ ವಿಮತಿರ್ನ ಹಿ||''** (೭೦) (ಬ್ರಹ್ಮವು ಅಪರೋಕ್ಷವಾಗುವದಕ್ಕೆ ಮಹಾವಾಕ್ಯವು ಅವಶ್ಯವೆಂದು ವಾಕ್ಯವೃತ್ತಿಯಲ್ಲಿ ಹೇಳಿರುತ್ತದೆ; ಆದ್ದರಿಂದ ಮಹಾವಾಕ್ಯದಿಂದ ಬ್ರಹ್ಮಸಾಕ್ಷಾತ್ಕಾರವು ಆಗುವದೆಂಬ ವಿಷಯದಲ್ಲಿ ವಿವಾದವಿಲ್ಲ) ಎಂಬ ಶ್ಲೋಕವಿದೆ. ಆ ಶ್ಲೋಕದಿಂದ ಮುಂದಕ್ಕೆ ಎಂಟು ಶ್ಲೋಕಗಳನ್ನು★

---

★ ಪಂಚದಶಿಯಲ್ಲಿ ಉದಾಹೃತವಾಗಿರುವ ಈ ಶ್ಲೋಕಗಳನ್ನು ★ನಕ್ಷತ್ರಚಿಹ್ನೆಯಿಂದ ಗುರುತುಮಾಡಿ ಈ ಗ್ರಂಥದ ಶ್ಲೋಕಾನುಕ್ರಮಣಿಕೆಯಲ್ಲಿ ಪಂಚದಶಿಯ ಶ್ಲೋಕ ಸಂಖ್ಯೆಯನ್ನೂ ಕೊಟ್ಟಿರುತ್ತದೆ.

ವಾಕ್ಯವೃತ್ತಿಯಿಂದ ಉದಾಹರಿಸಿರುತ್ತದೆ. ಆದ್ದರಿಂದ ಪಂಚದಶೀಕಾರರು ಈ ಗ್ರಂಥವನ್ನು ಸರ್ವಮಾನ್ಯಗ್ರಂಥವೆಂದು ಇಟ್ಟುಕೊಂಡಿದ್ದರೆಂಬುದಕ್ಕೆ ಸಂಶಯವಿಲ್ಲ, **''ಅತದ್ವ್ಯಾವೃತ್ತಿರೂಪೇಣ ಸಾಕ್ಷಾದ್ವಿಧಿಮುಖೇನ ಚ । ವೇದಾನ್ತಾನಾಂ ಪ್ರವೃತ್ತಿಃ ಸ್ಯಾದ್ದ್ವಿಧೇತ್ಯಾಚಾರ್ಯಭಾಷಿತಮ್ ॥''** (೮೭) ಎಂಬ ಶ್ಲೋಕವೂ ಪಂಚದಶಿಯಲ್ಲಿದೆ. ಹೀಗೆ ಈ ಗ್ರಂಥದ ೨೮ನೆಯ ಶ್ಲೋಕಭಾಗವನ್ನು ಆಚಾರ್ಯವಚನವೆಂದು ಪಂಚದಶೀಕಾರರು ಉದಾಹರಿಸಿರುತ್ತಾರಾದರೂ ಆ ಆಚಾರ್ಯರು ಶಂಕರಭಗವತ್ಪಾದರೋ ಅಥವಾ ಪಂಚದಶಿಯ ಮೊದಲನೆಯ ಅಧ್ಯಾಯದಲ್ಲಿ ಹೇಳಿರುವ ಶ್ರೀಶಂಕರಾನಂದರೋ ಗೊತ್ತುಪಡಿಸುವದಕ್ಕೆ ಸಾಕಾದಷ್ಟು ಆಧಾರವಿರುವದಿಲ್ಲ. ಗ್ರಂಥಾರಂಭದಲ್ಲಿರುವ ಮಂಗಳದಲ್ಲಿ 'ಶ್ರೀವಲ್ಲಭಂ ವಿಮಲಬೋಧಘನಂ ನಮಾಮಿ' ಎಂದಿದೆ. ಈ ರೀತಿಯಲ್ಲಿ ಆಚಾರ್ಯರು ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಬರೆದಿರುವದಿಲ್ಲ. ಶ್ರೀವಲ್ಲಭನೆಂಬುದು ಗ್ರಂಥಕರ್ತನ ಯಾವದಾದರೊಂದು ಇಷ್ಟದೇವತೆಯ ಹೆಸರಾಗಿದ್ದರೂ ಇರಬಹುದು; ಅಥವಾ ನಾವು ಕನ್ನಡಿಸಿರುವಂತೆ ಲಕ್ಷ್ಮೀಪತಿಯಾದ ವಿಷ್ಣುವಿನ ವಿಶೇಷಣವಾಗಿದ್ದರೂ ಇರಬಹುದಾಗಿದೆ.

ಈಗ ನಾವು ಹೊರಕ್ಕೆ ತಂದಿರುವ ವಾಕ್ಯವೃತ್ತಿಯಲ್ಲಿ ೫೩ ಶ್ಲೋಕಗಳಿವೆ. ಪೂನಾದಲ್ಲಿ ಆನಂದಾಶ್ರಮದಲ್ಲಿ ವಿಶ್ವೇಶ್ವರಟೀಕೆಯೊಂದಿಗೆ ಪ್ರಕಾಶವಾಗಿರುವ ಪ್ರತಿ, ಶ್ರೀರಂಗದಲ್ಲಿ ವಾಣೀವಿಲಾಸ ಮುದ್ರಣಾಲಯದಲ್ಲಿ ಶ್ರೀಶಂಕರಭಗವತ್ಪಾದರ ಕೃತಿಸಂಗ್ರಹದಲ್ಲಿ ಪ್ರಕಾಶವಾಗಿರುವ ಪ್ರತಿ, ನಿರ್ಣಯಸಾಗರದಲ್ಲಿ ಬೃಹತ್‌ಸ್ತೋತ್ರರತ್ನಾಕರದಲ್ಲಿ ಪ್ರಕಾಶವಾಗಿರುವ ಪ್ರತಿ- ಈ ಮೂರರಲ್ಲಿಯೂ ೫೩ ಶ್ಲೋಕಗಳೇ ಇವೆ. ಆದರೆ ತಂಜಾವೂರ ಲೈಬ್ರೆರಿಯಲ್ಲಿರುವ ಒಂದು ಪ್ರತಿಯಲ್ಲಿ ೫೫ ಶ್ಲೋಕಗಳಿರುವದಾಗಿ ಕರ್ನಲ್ ಜೇಕಬ್‌ರವರು ಬರೆದಿರುತ್ತಾರೆ. ಅದರಲ್ಲಿರುವ ಹೆಚ್ಚಿಗೆಯ ಎರಡು ಶ್ಲೋಕಗಳು ಯಾವವೆಂಬುದು ತಿಳಿಯಲಿಲ್ಲ.

ಇದೂ ಅಲ್ಲದೆ ಜೇಕಬರು ನೋಡಿದ ವಾಕ್ಯವೃತ್ತಿಯ ೪೫ನೆಯ ಶ್ಲೋಕ (ನಾವು ಪ್ರಕಟಿಸಿರುವ ಪ್ರತಿಯ ೪೩ನೆಯ ಶ್ಲೋಕ) ದಲ್ಲಿ ''ತಥಾ

ವಾಖ್ಯಾತಮಾದರಾತ್'' (ಹಾಗೆ ಆದರದಿಂದ ವ್ಯಾಖ್ಯಾನಮಾಡಿರುತ್ತೇವೆ) ಎಂಬ ಭಾಗಕ್ಕೆ ಟೀಕಾಕಾರನು **''ವ್ಯಾಖ್ಯಾತಂ ಬೃಹತ್ಯಾಂ ವಾಕ್ಯವೃತ್ತಾಮಿತಿ ಶೇಷಃ''** (ವ್ಯಾಖ್ಯಾನಮಾಡಿರುತ್ತೇವೆ ಎಂಬಲ್ಲಿ 'ಬೃಹದ್ವಾಕ್ಯವೃತ್ತಿಯಲ್ಲಿ' ಎಂದು ಸೇರಿಸಿಕೊಳ್ಳಬೇಕು)- ಎಂದು ವಿವರಿಸಿದಾನಂತೆ. ಹಾಗಿದ್ದರೆ ಆ ಟೀಕೆಯು ಆನಂದಾಶ್ರಮದಲ್ಲಿ ಪ್ರಕಟವಾಗಿರುವ ವಿಶ್ವೇಶ್ವರಟೀಕೆಯಲ್ಲವೆಂದು ಹೇಳಬೇಕಾಗಿದೆ ; ಏಕೆಂದರೆ ವಿಶ್ವೇಶ್ವರಟೀಕೆಯಲ್ಲಿ ''ವಾಕ್ಯಂ ಯಥಾ ಪ್ರವರ್ತತೇ ತಥಾಸ್ಮಾಭಿರ್ವ್ಯಾಖ್ಯಾತಮಿತ್ಯನೇನ ವ್ಯಾಖ್ಯಾನವ್ಯಾಖ್ಯೇಯ-ಯೋರೇಕಸ್ವರೂಪತ್ವೇನಾನ್ಯೋನ್ಯವಿರೋಧಾಭಾವಾದಸ್ಮತ್ಪ್ರಣೀತೋ ಗ್ರನ್ಥೋ ವಿದ್ವದ್ಭಿರ್ನೋಪೇಕ್ಷಣೀಯ ಇತ್ಯರ್ಥಾದುಕ್ತಂ ಭವತಿ । ಆದರಾದೇವ ವ್ಯಾಕೃತ ಏತಚ್ಛ್ರೋತೄಣಾಂ ಮುಮುಕ್ಷೂಣಾಂ ನಿಸ್ಸಂಶಯಸ್ವರೂಪಸಾಕ್ಷಾತ್ಕಾರೋ ಭವಿಷ್ಯತೀತಿ ತಾತ್ಪರ್ಯಂ, ನ ತು ವಿಜಿಗೀಷುತ್ವೇನ'' (ವಾಕ್ಯಾರ್ಥವನ್ನು ತಿಳಿಸುವದಕ್ಕೆ ವಾಕ್ಯವು ಹೇಗೆ ಪ್ರವರ್ತಿಸುವದೆಂಬುದನ್ನು ನಾವು ವಿವರಿಸಿದ್ದೇವೆ'- ಎಂದದ್ದರಿಂದ ವ್ಯಾಖ್ಯಾನ ವ್ಯಾಖ್ಯೇಯಗಳೆರಡೂ ಒಂದೇ ಸ್ವರೂಪವಾಗಿರುವದರಿಂದ ನಾವು ಮಾಡಿರುವ ಗ್ರಂಥವನ್ನು ವಿವೇಕಿಗಳು ಅಸಡ್ಡೆಮಾಡತಕ್ಕದ್ದಲ್ಲ- ಎಂದು ಹೇಳಿದಂತೆಯೇ ಆಯಿತು. ಆದರದಿಂದಲೇ ವಿವರಿಸಿದ್ದೇವೆ, ಇದನ್ನು ಶ್ರವಣ ಮಾಡುವ ಮುಮುಕ್ಷುಗಳಿಗೆ ನಿಸ್ಸಂಶಯವಾಗಿ ಸ್ವರೂಪಸಾಕ್ಷಾತ್ಕಾರವಾಗಲೆಂದೇ ನಮ್ಮ ತಾತ್ಪರ್ಯವೇ ಹೊರತು ಮತ್ತೊಬ್ಬರನ್ನು ಗೆಲ್ಲಬೇಕೆಂಬುದಲ್ಲ) ಎಂದು ಬರೆದಿದೆ. ಮತ್ತು ಈ ಶ್ಲೋಕದ ಅವತಾರಿಕೆಯಲ್ಲಿ **''ತತ್ತ್ವಮಸ್ಯಾದಿವಾಕ್ಯಂ ವಾಚ್ಯಾರ್ಥಪರಿತ್ಯಾಗೇನ ಪ್ರವರ್ತಮಾನಂ 'ಪ್ರತ್ಯಗ್ಬೋಧೋ ಯ ಆಭಾತಿ' ಇತ್ಯಾದಿ ಶ್ಲೋಕೇನ ಸ್ಫುಟೀಕೃತ ಮಿತ್ಯಾಹ''**- ('ತತ್ತ್ವಮಸಿ' ಮುಂತಾದ ವಾಕ್ಯವು ವಾಚ್ಯಾರ್ಥವನ್ನು ಬಿಟ್ಟು ಹೇಗೆ ಪ್ರವರ್ತಿಸುತ್ತದೆಯೆಂಬುದನ್ನು 'ಪ್ರತ್ಯಗ್ಬೋಧೋ' ಎಂಬ ಶ್ಲೋಕದಲ್ಲಿ ಸ್ಪಷ್ಟಗೊಳಿಸಿದ್ದಾಗಿದೆಯೆಂದು ಹೇಳುತ್ತಾರೆ) ಎಂದಿದೆ. ಅಂತೂ ತಂಜಾವೂರಿನ ಪ್ರತಿಯ ಟೀಕಾಕಾರನ ಮತದಲ್ಲಿ ಪ್ರಕೃತವಾಕ್ಯವೃತ್ತಿಗಿಂತಲೂ ವಿಸ್ತಾರವಾಗಿರುವ ವಾಕ್ಯವೃತ್ತಿಯೊಂದಿದೆಯೆಂದು ತಿಳಿದುಬರುತ್ತದೆ ; ವಾಕ್ಯವೃತ್ತಿಯಲ್ಲಾಗಲಿ ವಿಶ್ವೇಶ್ವರಟೀಕೆಯಲ್ಲಾಗಲಿ ಇದೇ ಗ್ರಂಥಕರ್ತನು ಆ ಹೆಸರಿನ ಮತ್ತೊಂದು

ಗ್ರಂಥವನ್ನು ಬರೆದಿದ್ದಾನೆಂಬುದಕ್ಕೆ ಯಾವ ಸೂಚನೆಯೂ ಸಿಕ್ಕುವದಿಲ್ಲ ವೆಂಬುದು ನಿರ್ವಿವಾದವು.

ಇನ್ನು 'ಲಘುವಾಕ್ಯವೃತ್ತಿ'ಯ ಕಡೆಗೆ ತಿರುಗಿದರೆ ಆ ಹೆಸರಿನಲ್ಲಿಯೇ ಮತ್ತೊಂದು ವಾಕ್ಯವೃತ್ತಿಯಿದೆಯೆಂಬ ಭಾವವು ಅಡಗಿರುತ್ತದೆ. ಆದರೆ ಈಗ ನಾವು ಬೆಳಕಿಗೆ ಹಿಡಿಯುತ್ತಿರುವ ವಾಕ್ಯವೃತ್ತಿಯನ್ನಾಗಲಿ ಬೇರೊಂದು ವಾಕ್ಯವೃತ್ತಿಯನ್ನಾಗಲಿ ಲಘುವಾಕ್ಯವೃತ್ತಿಯನ್ನು ಬರೆದಾತನು ಬರೆದಿದ್ದಾನೆಂಬುದಕ್ಕೆ ಯಾವ ಆಧಾರವೂ ಇರುವದಿಲ್ಲ. ಆದ್ದರಿಂದ ಆ ಗ್ರಂಥಕಾರನು **ಬೃಹದ್ವಾಕ್ಯವೃತ್ತಿ**ಯೆಂದು ಯಾವ ಗ್ರಂಥವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೆಂಬುದನ್ನು ಗೊತ್ತುಪಡಿಸುವದಕ್ಕೆ ಆಗುವಹಾಗಿಲ್ಲ. ಲಘುವಾಕ್ಯವೃತ್ತಿಯಲ್ಲಿ ಮಹಾವಾಕ್ಯದ ವಿಚಾರವೇನೂ ಇರುವದೇ ಇಲ್ಲ. ಸ್ಥೂಲಸೂಕ್ಷ್ಮಕಾರಣಗಳೆಂಬ ಮೂರು ದೇಹಗಳು, ಚಿದಾಭಾಸ- ಇವುಗಳನ್ನು ಬೆಳಗುವ ಸಾಕ್ಷಿಚೈತನ್ಯವನ್ನು ಸಂಕ್ಷೇಪವಾಗಿ ಹೇಳಿದಬಳಿಕ ಜಾಗ್ರದವಸ್ಥೆಯಲ್ಲಿ ಚಿತ್ತವೃತ್ತಿಯಿಂದಾಗುವ ವಿಷಯವಿಕಲ್ಪಗಳ ನಡುನಡುವೆ ನಿರ್ವಿಕಲ್ಪಕ ಚೈತನ್ಯವು ತೋರುವದೆಂದೂ ವಿಕಲ್ಪಗಳನ್ನು ನಿರೋಧಮಾಡಿಕೊಳ್ಳುವದರಿಂದ ನಿರ್ವಿಕಲ್ಪಸಮಾಧಿಯಾಗಿ ಬ್ರಹ್ಮಸಾಕ್ಷಾತ್ಕಾರವಾಗುವದೆಂದೂ ಹೇಳಿರುತ್ತದೆ. 'ವಾಕ್ಯವೃತ್ತಿಯಿಂದ ಕೈಯಲ್ಲಾದಮಟ್ಟಿಗೆ ತಿಳಿದುಕೊಂಡು ಬ್ರಹ್ಮಾಭ್ಯಾಸವನ್ನು ಮಾಡಿ ಕೃತಕೃತ್ಯನಾಗಬೇಕು'- ಎಂದು ಇಲ್ಲಿ ಹೇಳಿರುವದರಿಂದ ಬರಿಯ ವಾಕ್ಯದಿಂದ ಅಪರೋಕ್ಷಜ್ಞಾನವಾಗಲಾರದೆಂಬ ಅಭಿಪ್ರಾಯವು ಗ್ರಂಥಕಾರನಿಗೆ ಇದ್ದರೂ ಇರಬಹುದು. ಈ ಅಭಿಪ್ರಾಯವು ಪ್ರಸ್ಥಾನತ್ರಯಭಾಷ್ಯಕ್ಕೂ ಪಂಚದಶಿಯ ತೃಪ್ತಿದೀಪಕರ್ತರ ಅಭಿಪ್ರಾಯಕ್ಕೂ ವಿರುದ್ಧವಾದರೂ ವೇದಾಂತಪ್ರಕರಣಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. ಈ ಲಘುವಾಕ್ಯವೃತ್ತಿಯಲ್ಲಿ ಯೋಗವಾಸಿಷ್ಠದ ಒಂದು ಶ್ಲೋಕವನ್ನೂ ಉದಾಹರಿಸಿರುತ್ತದೆ. ಇದರಿಂದಲೂ ಈ ಪ್ರಕರಣವು ಈಚಿನದೆಂದು ತೋರುತ್ತದೆ.

ವಾಕ್ಯವೃತ್ತಿಯಲ್ಲಿ **ತತ್ತ್ವಮಸಿ** ಎಂಬ ಮಹಾವಾಕ್ಯದಿಂದ ಅಪರೋಕ್ಷಜ್ಞಾನವಾಗುವ ಬಗೆಯನ್ನೂ ಅದರಿಂದ ಮುಕ್ತಿಯಾಗುವ ರೀತಿಯನ್ನೂ ತಿಳಿಸಿದೆ. ಅದರಲ್ಲಿ ವರ್ಣಿಸಿರುವಂತೆ 'ಭಾಗಲಕ್ಷಣೆ'ಯನ್ನು

ತಿಳಿಸುವದು ಈಚಿನ ವೇದಾಂತಗ್ರಂಥಗಳಲ್ಲಿ ಬಹಳ ರೂಢಿಯಾಗಿರುತ್ತದೆ. ವಾಕ್ಯಾರ್ಥದ ಜ್ಞಾನವು ದೃಢವಾಗುವವರೆಗೂ ಶ್ರವಣವೇ ಮುಂತಾದವುಗಳನ್ನು ಮತ್ತೆಮತ್ತೆ ಅಭ್ಯಾಸಮಾಡಬೇಕೆಂದು ಈ ಗ್ರಂಥದ ೪೯ನೆಯ ಶ್ಲೋಕದಲ್ಲಿ ಹೇಳಿರುತ್ತದೆ ; ವಾಕ್ಯಾರ್ಥವನ್ನು ತಿಳಿಯುವದಕ್ಕೆ ಪದಾರ್ಥಜ್ಞಾನವು ಅವಶ್ಯವಾಗಿರುತ್ತದೆಯೆಂದು ಭಾಷ್ಯಕಾರರು ಸ್ಪಷ್ಟವಾಗಿ ಬರೆದಿರುತ್ತಾರಾದರೂ ವಾಕ್ಯಾರ್ಥವು ಆದಮೇಲೆ ಅದು ದೃಢವಾಗದೆ ಹೋಗಬಹುದೆಂಬುದನ್ನು ಅವರು ಒಪ್ಪುವಂತೆ ಕಾಣುವದಿಲ್ಲ. **ತೃಪ್ತಿದೀಪಿಕೆ**ಯಲ್ಲಿ (೯೭, ೯೮) ಈ ಶ್ಲೋಕವನ್ನು ಉದಾಹರಿಸಿ ಅಪರೋಕ್ಷಜ್ಞಾನವು ಕೂಡ ದೃಢವಾಗದೆ ಇರಬಹುದೆಂದು ಪ್ರತಿಪಾದಿಸಿರುವದು ಕಂಡುಬರುತ್ತದೆ. ವಾಕ್ಯವೃತ್ತಿಕಾರರ ಮತವು ಈ ವಿಷಯದಲ್ಲಿ ಹೀಗೆಯೇ ಇರುವದೆಂದು ಖಂಡಿತವಾಗಿ ಹೇಳುವದಕ್ಕೆ ಬರುವಹಾಗಿಲ್ಲ.

ಇದೇ ಗ್ರಂಥದ ೫೧ನೆಯ ಶ್ಲೋಕದಲ್ಲಿ ಸದ್ಯೋಮುಕ್ತಿಯನ್ನೂ ೫೨ರಲ್ಲಿ ಜೀವನ್ಮುಕ್ತಿಯನ್ನೂ ತಿಳಿಸಿದೆಯಷ್ಟೆ ; ಈ ಎರಡು ಮುಕ್ತಿಗಳ ವಿಷಯಕ್ಕೆ ಶ್ರೀಶಂಕರಾಚಾರ್ಯರಿಂದೀಚಿನ ವೇದಾಂತಿಗಳು ಹೊರಪಡಿಸಿರುವ ಅಭಿಪ್ರಾಯವು ತಾನೇ ಒಂದು ಬಗೆಯದಾಗಿರುತ್ತದೆ. ಜ್ಞಾನವಾದ ಕೂಡಲೆ ಶರೀರವು ಬಿದ್ದುಹೋಗುವದು **ಸದ್ಯೋಮುಕ್ತಿ**ಯೆಂದೂ ಜ್ಞಾನವಾದ ಮೇಲೆ ಅವಿದ್ಯಾಲೇಶದಿಂದ ಪ್ರಾರಬ್ಧಕರ್ಮದ ಫಲವಾದ ದೇಹವು ಇದ್ದುಕೊಂಡಿರುವದೇ **ಜೀವನ್ಮುಕ್ತಿ**ಯೆಂದೂ ಅವರು ಅಭಿಪ್ರಾಯಪಡುತ್ತಾರೆ. ವಾಚಕರಿಗೆ ಈ ವಾದದ ಸಂಕ್ಷೇಪವನ್ನು ತಿಳಿಸುವದಕ್ಕೆಂದು ಪರಿಶಿಷ್ಟದಲ್ಲಿ **ಸಂಕ್ಷೇಪಶಾರೀರಕ**ದಿಂದ ಆರಿಸಿದ ಗ್ರಂಥಭಾಗವನ್ನು ಕೊಟ್ಟಿರುತ್ತದೆ. ವಾಕ್ಯವೃತ್ತಿಯ ೫೧, ೫೨ನೆಯ ಶ್ಲೋಕಗಳಿಗೆ ಇದೇ ಅಭಿಪ್ರಾಯವಿದೆಯೆಂದು ಸ್ಪಷ್ಟವಾಗಿ ತೋರುತ್ತಿದ್ದರೂ ವ್ಯಾಖ್ಯಾನಕಾರನು ಮಾತ್ರ ಬೇರೊಂದು ಬಗೆಯಲ್ಲಿ ಅರ್ಥವನ್ನು ಮಾಡುವದಕ್ಕೆ ಪ್ರಯತ್ನಮಾಡಿರುತ್ತಾನೆ. ಆ ಭಾಗವನ್ನೂ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇನೆ. ಶ್ರೀಶಂಕರಾಚಾರ್ಯರ ಸಿದ್ಧಾಂತದಲ್ಲಿ ವಿದೇಹಮುಕ್ತಿಯೆಂಬುದೇ ಗೌಣವೆಂದೂ ಬದುಕಿರುವಾಗಲೇ ಜ್ಞಾನದಿಂದಾಗುವ ಮುಕ್ತಿಯೇ ಮುಖ್ಯವೆಂದೂ ಬೃ. ಭಾ. ೪-೪-೭, ಬ್ರ. ಸೂ. ಭಾ. ೧-೧-೪ ಇವುಗಳಲ್ಲಿ ಸ್ಪಷ್ಟವಾಗಿರುತ್ತದೆ.

ಹೀಗೆ ನಾವು ಈಗ ಪ್ರಕಟಮಾಡಿರುವ ಗ್ರಂಥಗಳೆರಡೂ ಶಂಕರ ಭಗವತ್ಪಾದಕೃತವೆಂದು ಹೇಳುವದಕ್ಕೆ ಕೆಲವು ಅಡ್ಡಿಗಳಿದ್ದರೂ ನಿರುಪಾಧಿಕವಾದ ಸಚ್ಚಿದಾನಂದಬ್ರಹ್ಮವೇ ನಮ್ಮೆಲ್ಲರ ಆತ್ಮನೆಂಬುದನ್ನು ಸಂಗ್ರಹವಾಗಿ ತಿಳಿಸುವದರಿಂದ ಮನನಕ್ಕೆ ಯೋಗ್ಯವಾಗಿರುತ್ತವೆ. ಅನುವಾದ ಟಿಪ್ಪಣಿ ಪರಿಶಿಷ್ಟಗಳ ಸಮೇತವಾಗಿ ಪ್ರಕಾಶಕ್ಕೆ ತಂದಿರುವ ಈ ಗ್ರಂಥಸಂಸ್ಕರಣವು ಜಿಜ್ಞಾಸುಗಳಿಗೂ ಗ್ರಂಥತತ್ತ್ವ ಶೋಧಕರಿಗೂ ಪ್ರಯೋಜನಕಾರಿಗಳಾಗಿರುವವೆಂದು ನಂಬಿರುತೇನೆ.

**ಈಶ್ವರ ಸಂವತ್ಸರ ಶ್ರಾವಣ ಶುದ್ಧ ೪** **ಸಂಸ್ಕರ್ತ**
(1937)

------

# ವಿಷಯಾನುಕ್ರಮಣಿಕೆ


ಪುಟ

ಮುನ್ನುಡಿ (iii)

ಪೀಠಿಕೆ (iv)

ಓದುಗರಿಗೆ (x)

ವಾಕ್ಯವೃತ್ತಿ - ಸಂಸ್ಕೃತಮೂಲ, ಅನುವಾದ ಟಿಪ್ಪಣಿಗಳೊಡನೆ ೧

ಲಘುವಾಕ್ಯವೃತ್ತಿ - ಸಂಸ್ಕೃತಮೂಲ, ಅನುವಾದ, ಟಿಪ್ಪಣಿಗಳೊಡನೆ ೧೭

**ಪರಿಶಿಷ್ಟಗಳು :**

೧. ಶ್ಲೋಕಾನುಕ್ರಮಣಿಕೆ ೨೪

೨. ಪ್ರಮಾಣವಾಕ್ಯಗಳ ಸೂಚಿಕೆ ೨೭

೩. ವಿದೇಹಮುಕ್ತಿಯ ವಿಚಾರ ೨೮

೪. ಶಬ್ದಾನುಕ್ರಮಣಿಕೆ ೩೩

# ಓದುಗರಿಗೆ

ಕನ್ನಡದ ಅನುವಾದವನ್ನು ವಾಕ್ಯಬೃಂದಗಳಾಗಿ ವಿಂಗಡಿಸಿ ಆಯಾ ವಾಕ್ಯಬೃಂದದ ಮೊದಲು ಶ್ಲೋಕಸಂಖ್ಯೆಗಳನ್ನು ಕೊಟ್ಟಿರುತ್ತದೆ. ಗ್ರಂಥದಲ್ಲಿ ಬರುವ ಅಕ್ಷರಸಂಕೇತಗಳನ್ನು ಈ ಕೆಳಗೆ ಕೊಟ್ಟಿರುತ್ತದೆ :

| | |
|---|---|
| ಕ. | ಕಠೋಪನಿಷತ್ತು |
| ಕೌ. | ಕೌಷೀತಕ್ಯುಪನಿಷತ್ತು |
| ಛಾಂ. | ಛಾಂದೋಗ್ಯೋಪನಿಷತ್ತು |
| ತೈ | ತೈತ್ತಿರೀಯೋಪನಿಷತ್ತು |
| ಪಾ\|\| | ಪಾಠಾಂತರ |
| ಪಾ\|\| ಆ\|\| | ಆನಂದಾಶ್ರಮದಲ್ಲಿ ಪ್ರಕಟವಾಗಿರುವ ಪುಸ್ತಕದಲ್ಲಿರುವ ಪಾಠಾಂತರ |
| ಪಾ\|\| ಓ\|\| | ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಪ್ರಕಾಶಿತವಾಗಿರುವ ಪುಸ್ತಕದಲ್ಲಿರುವ ಪಾಠಾಂತರ. |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ. ಭಾ. | ಬೃಹದಾರಣ್ಯಕೋಪನಿಷದ್ಭಾಷ್ಯ |
| ಬ್ರ. ಸೂ. | ಬ್ರಹ್ಮಸೂತ್ರ |
| ಬ್ರ. ಸೂ. ಭಾ. | ಬ್ರಹ್ಮಸೂತ್ರಭಾಷ್ಯ |
| ಮಾಂ. ಕಾ. ಭಾ. | ಮಾಂಡೂಕ್ಯಕಾರಿಕಾಭಾಷ್ಯ |
| ಮುಂ. | ಮುಂಡಕೋಪನಿಷತ್ತು |
| ಶ್ವೇ. | ಶ್ವೇತಾಶ್ವತರೋಪನಿಷತ್ತು |

--------

ಓಂ

# ವಾಕ್ಯವೃತ್ತಿ

------

ಸರ್ಗಸ್ಥಿತಿಪ್ರಲಯಹೇತುಮಚಿನ್ತ್ಯಶಕ್ತಿಂ
ವಿಶ್ವೇಶ್ವರಂ ವಿದಿತವಿಶ್ವಮನನ್ತಮೂರ್ತಿಮ್ ।
ನಿರ್ಮುಕ್ತಬನ್ಧನಮಪಾರಸುಖಾಮ್ಬುರಾಶಿಂ
ಶ್ರೀವಲ್ಲಭಂ ವಿಮಲಬೋಧಘನಂ ನಮಾಮಿ ॥೧॥

ಯಸ್ಯ ಪ್ರಸಾದಾದಹಮೇವ ವಿಷ್ಣು-
ರ್ಮಯ್ಯೇವ ಸರ್ವಂ ಪರಿಕಲ್ಪಿತಂ ಚ ।
ಇತ್ಥಂ ವಿಜಾನಾಮಿ ಸದಾತ್ಮರೂಪಂ
ತಸ್ಯಾಙ್ಘ್ರಿಪದ್ಮಂ ಪ್ರಣತೋಽಸ್ಮಿ ನಿತ್ಯಮ್ ॥೨॥

೧-೨. ಅಚಿಂತ್ಯವಾದ ಶಕ್ತಿಯಿಂದೊಡಗೂಡಿದವನಾಗಿ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾಗಿ ಜಗತ್ತಿಗೊಡೆಯನೂ ಸಮಸ್ತವನ್ನೂ ಅರಿಯುವಾತನೂ ಅನಂತರೂಪನೂ ಯಾವ ಬಂಧನವೂ ಇಲ್ಲದಾತನೂ ಅನಂತವಾದ ಸುಖದ ಸಾಗರನೂ ಆಗಿರುವ ಶುದ್ಧ ಚಿದ್ಘನನಾದ ಲಕ್ಷ್ಮೀಪತಿಯನ್ನು ನಮಸ್ಕರಿಸುತ್ತೇನೆ. ಯಾವಾತನ ಅನುಗ್ರಹದಿಂದ ನಾನೇ ವಿಷ್ಣುವಾಗಿರುವೆನೆಂದೂ ನನ್ನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದೆಂದೂ- ಈ ಪರಿಯಲ್ಲಿ ಸದ್ರೂಪವಾದ ಆತ್ಮಸ್ವರೂಪವನ್ನು ತಿಳಿದುಕೊಂಡೆನೋ ಅವನ ಪಾದಕಮಲಕ್ಕೆ ನಿತ್ಯವೂ ನಮಸ್ಕರಿಸುವೆನು.

ತಾಪತ್ರಯಾರ್ಕಸಂತಪ್ತಃ ಕಶ್ಚಿದುದ್ವಿಗ್ನಮಾನಸಃ ।
ಶಮಾದಿಸಾಧನೈರ್ಯುಕ್ತಃ ಸದ್ಗುರುಂ ಪರಿಪೃಚ್ಛತಿ ॥೩॥

ಅನಾಯಾಸೇನ ಯೇನಾಸ್ಮಾನ್ಮುಚ್ಯೇಯಂ ಭವಬನ್ಧನಾತ್ ।
ತನ್ಮೇ ಸಂಕ್ಷಿಪ್ಯ ಭಗವನ್ ಕೇವಲಂ ಕೃಪಯಾ ವದ ॥೪॥

೩-೪. ಮೂರು ತಾಪಗಳೆಂಬ[1] ಸೂರ್ಯನ ಬಿಸಿಲಿನಲ್ಲಿ ಬೆಂದು ಮನಸ್ಸಿನಲ್ಲಿ ತಳಮಳವನ್ನು ಹೊಂದಿದ ಯಾವನೋ ಒಬ್ಬನು ಶಮವೇ ಮುಂತಾದ[2] ಸಾಧನಗಳಿಂದೊಡಗೂಡಿದವನಾಗಿ ಸದ್ಗುರುವನ್ನು ಹೀಗೆಂದು ಕೇಳುತ್ತಾನೆ : ''ಪೂಜ್ಯರೆ, ಈ ಸಂಸಾರಬಂಧದಿಂದ ನಾನು ಸುಲಭವಾಗಿ ಏತರಿಂದ ಬಿಡುಗಡೆಹೊಂದಬಹುದೋ ಅದನ್ನು ಸಂಕ್ಷೇಪವಾಗಿ ಕೇವಲ ಕೃಪೆಯಿಂದ ಹೇಳಬೇಕು.''

**ಸಾಧ್ವೀ ತೇ ವಚನವ್ಯಕ್ತಿಃ ಪ್ರತಿಭಾತಿ ವದಾಮಿ ತೇ ।**
**ಇದಂ ತದಿತಿ ವಿಸ್ಪಷ್ಟಂ ಸಾವಧಾನಮನಾಃ ಶೃಣು ॥ ೫ ॥**

**ತತ್ತ್ವಮಸ್ಯಾದಿವಾಕ್ಯೋತ್ಥಂ ಯಜ್ಜೀವಪರಮಾತ್ಮನೋಃ ।**
**ತಾದಾತ್ಮ್ಯವಿಷಯಂ ಜ್ಞಾನಂ ತದಿದಂ ಮೋಕ್ಷಸಾಧನಮ್ ॥ ೬ ॥**

**ಕೋ ಜೀವಃ ಕಃ ಪರಶ್ಚಾತ್ಮಾ ತಾದಾತ್ಮ್ಯಂ ವಾ ಕಥಂ ತಯೋಃ ।**
**ತತ್ತ್ವಮಸ್ಯಾದಿವಾಕ್ಯಂ ವಾ ಕಥಂ ತತ್ಪ್ರತಿಪಾದಯೇತ್ ॥ ೭ ॥**

**ಅತ್ರ ಬ್ರೂಮಃ ಸಮಾಧಾನಂ ಕೋಽನ್ಯೋ ಜೀವಸ್ತ್ವಮೇವ ಹಿ ।**
**ಯಸ್ತ್ವಂ ಪೃಚ್ಛಸಿ ಕೋಽಹಂ ಮಾಂ ಬ್ರಹ್ಮೈವಾಸಿ ನ ಸಂಶಯಃ ॥ ೮ ॥**

**ಪದಾರ್ಥಮೇವ ಜಾನಾಮಿ ನಾದ್ಯಾಪಿ ಭಗವನ್ ಸ್ಫುಟಮ್ ।**
**ಅಹಂ ಬ್ರಹ್ಮೇತಿ ವಾಕ್ಯಾರ್ಥಂ ಪ್ರತಿಪದ್ಯೇ ಕಥಂ ವದ ॥ ೯ ॥**

೫-೯. **ಗುರು** :- ನಿನ್ನ ಮಾತಿನ ರೀತಿಯು ನನಗೆ ಚೆನ್ನಾಗಿ ಕಾಣುತ್ತದೆ. ಇದೇ ಆ ಉಪಾಯವೆಂದು ಸ್ಪಷ್ಟವಾಗಿ ನಿನಗೆ ಹೇಳುತ್ತೇನೆ.

---

1. ಆಧ್ಯಾತ್ಮಿಕ (ತನ್ನಲ್ಲಿಯೇ ಉಂಟಾಗುವದು), ಆಧಿಭೌತಿಕ (ಹೊರಗಿನ ಭೂತಗಳಿಂದ ಎಂದರೆ ಪ್ರಾಣ್ಯಾದಿಗಳಿಂದ ಆಗತಕ್ಕದ್ದು), ಆಧಿದೈವಿಕ (ಅಂತರಿಕ್ಷದ ಚಂದ್ರ, ಸೂರ್ಯ, ಮಿಂಚು- ಮುಂತಾದವುಗಳಿಂದ ಆಗತಕ್ಕದ್ದು)- ಎಂದು ಮನುಷ್ಯರಿಗೆ ಮೂರು ಬಗೆಯ ತಾಪಗಳು ಆಗುತ್ತಿರುವವೆಂದು ಸಾಂಖ್ಯರು ಹೇಳುತ್ತಾರೆ.

2. ಶಮ, ದಮ, ಉಪರತಿ, ಶ್ರದ್ಧಾ, ತಿತಿಕ್ಷಾ, ಸಮಾಧಾನ- ಎಂಬ.

ಮನಸ್ಸಿನಲ್ಲಿ ಅವಧಾನದಿಂದೊಡಗೂಡಿ ಕೇಳು. **"ತತ್ತ್ವಮಸಿ"** (ಅದೇ ನೀನಾಗಿರುವೆ) ಎಂಬುದೇ ಮುಂತಾದ ವಾಕ್ಯದಿಂದುಂಟಾದ 'ಜೀವಾತ್ಮ ಪರಮಾತ್ಮರು ಒಂದೇ' ಎಂಬ ಜ್ಞಾನವಿದೆಯಲ್ಲ - ಇದೇ ಮುಕ್ತಿಗೆ ಸಾಧನವು.

**ಶಿಷ್ಯ :-** ಜೀವನೆಂದರೆ ಯಾರು ? ಪರಮಾತ್ಮನೆಂದರೆ ಯಾರು ? ಅವರಿಬ್ಬರೂ ಒಂದೇ ಎಂದರೆ ಹೇಗೆ ? 'ತತ್ತ್ವಮಸಿ' ಮುಂತಾದ ವಾಕ್ಯವು ಅದನ್ನು ತಿಳಿಸುವದೆಂಬುದಾದರೂ ಹೇಗೆ ?

**ಗುರು :-** ಇದಕ್ಕೆ ಸಮಾಧಾನವನ್ನು ಹೇಳುತ್ತೇವೆ. ಜೀವನೆಂದರೆ ಮತ್ತೆ ಯಾರು ? 'ನಾನು ಯಾರು ?' ಎಂದು ನನ್ನನ್ನು ಕೇಳುತ್ತಿರುವ ನೀನೇ ಅಲ್ಲವೆ ? ನಿಸ್ಸಂಶಯವಾಗಿ ನೀನು ಬ್ರಹ್ಮವೇ ಆಗಿರುವೆ.

**ಶಿಷ್ಯ :-** ಪೂಜ್ಯರೆ, ಇನ್ನೂ ನನಗೆ ಪದಗಳ ಅರ್ಥವೇ ಸರಿಯಾಗಿ ತಿಳಿದಿಲ್ಲ ; 'ನಾನು ಬ್ರಹ್ಮ' ಎಂಬ ವಾಕ್ಯದರ್ಥವನ್ನು ಹೇಗೆ ತಿಳಿದು ಕೊಂಡೇನು ? ಹೇಳಿ.

**ಸತ್ಯಮಾಹ ಭವಾನದ್ಯ ವಿಗಾನಂ ನೈವ ವಿದ್ಯತೇ ।**
**ಹೇತುಃ ಪದಾರ್ಥಬೋಧೋ ಹಿ ವಾಕ್ಯಾರ್ಥಾವಗತೇರಿಹ ॥೧೦॥**

**★ ಅನ್ತಃಕರಣತದ್ವೃತ್ತಿಸಾಕ್ಷೀ[1] ಚೈತನ್ಯವಿಗ್ರಹಃ ।**
**ಆನನ್ದರೂಪಃ ಸತ್ಯಃ ಸನ್ ಕಿಂ ನಾತ್ಮಾನಂ ಪ್ರಪದ್ಯಸೇ ॥೧೧॥**

**★ಸತ್ಯಾನನ್ದಸ್ವರೂಪಂ ಧೀಸಾಕ್ಷಿಣಂ ಜ್ಞಾನವಿಗ್ರಹಮ್ ।**
**ಚಿನ್ತಯಾತ್ಮತಯಾ ನಿತ್ಯಂ ತ್ಯಕ್ತ್ವಾ ದೇಹಾದಿಗಾಂ ಧಿಯಮ್ ॥೧೨॥**

**ರೂಪಾದಿಮಾನ್ಯತಃ ಪಿಣ್ಡಸ್ತತೋ ನಾತ್ಮಾ ಘಟಾದಿವತ್ ।**
**ವಿಯದಾದಿಮಹಾಭೂತವಿಕಾರತ್ವಾಚ್ಚ ಕುಮ್ಭವತ್ ॥೧೩॥**

---

1. 'ಸಾಕ್ಷಿಚೈತನ್ಯವಿಗ್ರಹಃ' ಪಾ ॥

೧೦-೧೩. **ಗುರು :-** ನೀನು ಹೇಳಿದ್ದು ನಿಜ, ಇದರಲ್ಲಿ ಬೇರೊಂದು ಅಭಿಪ್ರಾಯವೇ ಇಲ್ಲ. ಏಕೆಂದರೆ ಇಲ್ಲಿ ವಾಕ್ಯಾರ್ಥವನ್ನು ತಿಳಿದುಕೊಳ್ಳುವದಕ್ಕೆ ಪದಾರ್ಥಜ್ಞಾನವು ಕಾರಣವಾಗಿರುತ್ತದೆ. ಅಂತಃಕರಣ, ಅದರ ವೃತ್ತಿಗಳು- ಇವೆರಡಕ್ಕೂ ಸಾಕ್ಷಿಯಾಗಿರುವ ಚೈತನ್ಯಸ್ವರೂಪನೂ ಆನಂದಸ್ವರೂಪನೂ ಸತ್ಯಸ್ವರೂಪನೂ ಆಗಿದ್ದುಕೊಂಡು ನಿನ್ನ ಸ್ವರೂಪವನ್ನು ತಿಳಿದುಕೊಳ್ಳದೆ ಇರುವೆಯಲ್ಲ, ಇದೇಕೆ ?[1] ದೇಹಾದಿಗಳಲ್ಲಿರುವ ಆತ್ಮಬುದ್ಧಿಯನ್ನು ಬಿಟ್ಟು ಸತ್ಯಾನಂದಸ್ವರೂಪನಾಗಿಯೂ ಬುದ್ಧಿಗೆ ಸಾಕ್ಷಿಯಾಗಿಯೂ ಇರುವ ಜ್ಞಾನಸ್ವರೂಪನೇ ನಾನೆಂದು ಯಾವಾಗಲೂ ಚಿಂತಿಸುತ್ತಿರು. ಶರೀರವು ಗಡಿಗೆಯೇ ಮುಂತಾದವುಗಳಂತೆ ರೂಪಾದಿಗಳುಳ್ಳದ್ದಾಗಿರುವದು ; ಆದ್ದರಿಂದಲೂ ಗಡಿಗೆಯಂತೆ ಆಕಾಶಾದಿಮಹಾಭೂತಗಳ ಕಾರ್ಯವಾಗಿರುವದರಿಂದಲೂ[2] ಇದು ಆತ್ಮನಲ್ಲ.

**ಅನಾತ್ಮಾ ಯದಿ ಪಿಣ್ಡೋಽಯಮುಕ್ತಹೇತುಬಲಾನ್ಮತಃ ।**
**ಕರಾಮಲಕವತ್ಸಾಕ್ಷಾದಾತ್ಮಾನಂ ಪ್ರತಿಪಾದಯ ॥ ೧೪ ॥**

೧೪. **ಶಿಷ್ಯ :-** ಮೇಲೆ ಹೇಳಿದ ಕಾರಣದಿಂದ ಈ ಶರೀರವು ಅನಾತ್ಮವೆಂಬುದು ನಿಮ್ಮ ಅಭಿಪ್ರಾಯವಾದರೆ ಆತ್ಮನನ್ನು ಅಂಗೈನೆಲ್ಲಿಯಂತೆ ನೇರಾಗಿ ತಿಳಿಸೋಣವಾಗಲಿ.

---

1. ಈ ಶ್ಲೋಕಭಾಗವನ್ನು ಕೂಟಸ್ಥದೀಪದ ೨೫ನೆಯ ಶ್ಲೋಕದಲ್ಲಿ 'ಪೂರ್ವಾಚಾರ್ಯರ ವಚನ'ವೆಂದು ಉದಾಹರಿಸಿದೆ.

2. ಇದು ಅನುಮಾನಪ್ರಮಾಣವು. (೧) ದೇಹವು ಆತ್ಮನಲ್ಲ, ಏಕೆಂದರೆ ಇದು ರೂಪಾದಿಗಳುಳ್ಳದ್ದು ; ಯಾವ ಯಾವದಕ್ಕೆ ರೂಪಾದಿಗುಣಗಳುಂಟೋ ಅದೆಲ್ಲವೂ ಗಡಿಗೆಯೇ ಮುಂತಾದದ್ದರಂತೆ ಅನಾತ್ಮವಾಗಿರುತ್ತದೆ. (೨) ದೇಹವು ಆತ್ಮನಲ್ಲ, ಏಕೆಂದರೆ ಇದು ಆಕಾಶವೇ ಮುಂತಾದ ಪಂಚಭೂತಗಳ ಕಾರ್ಯವಾಗಿರುತ್ತದೆ ; ಯಾವಯಾವದು ಪಂಚಭೂತಗಳ ಕಾರ್ಯವಾಗಿರುವದೋ ಅದೆಲ್ಲವೂ ಗಡಿಗೆಯೇ ಮುಂತಾದದ್ದರಂತೆ ಅನಾತ್ಮವಾಗಿರುತ್ತದೆ- ಎಂಬ ಎರಡು ನ್ಯಾಯಗಳನ್ನು ಇಲ್ಲಿ ಕೊಟ್ಟಿದೆ.

**ಘಟದ್ರಷ್ಟಾ ಘಟಾದ್ಭಿನ್ನಃ ಸರ್ವಥಾ ನ ಘಟೋ ಯಥಾ ।**
**ದೇಹದ್ರಷ್ಟಾ ತಥಾ ದೇಹೋ ನಾಹಮಿತ್ಯವಧಾರಯ ॥ ೧೫ ॥**

**ಏವಮಿನ್ದ್ರಿಯದೃಙ್ನಾಹಮಿನ್ದ್ರಿಯಾಣೀತಿ ನಿಶ್ಚಿನು ।**
**ಮನೋ ಬುದ್ಧಿಸ್ತಥಾ ಪ್ರಾಣೋ ನಾಹಮಿತ್ಯವಧಾರಯ ॥ ೧೬ ॥**

**ಸಙ್ಘಾತೋಽಪಿ ತಥಾ ನಾಹಮಿತಿ ದೃಶ್ಯವಿಲಕ್ಷಣಮ್ ।**
**ದ್ರಷ್ಟಾರಮನುಮಾನೇನ ನಿಪುಣಂ ಸಂಪ್ರಧಾರಯ ॥ ೧೭ ॥**

೧೫-೧೭. **ಗುರು** :- ಗಡಿಗೆಯನ್ನು ನೋಡುವವನು ಗಡಿಗೆಗಿಂತ ಬೇರೆಯಾಗಿರುವನೇ ಹೊರತು ಖಂಡಿತವಾಗಿಯೂ ಹೇಗೆ ಗಡಿಗೆಯಲ್ಲವೋ ಹಾಗೆಯೇ ದೇಹವನ್ನು ನೋಡುವವನಾದ ನಾನು ದೇಹವಲ್ಲವೇ ಅಲ್ಲ- ಎಂದು ನಿಶ್ಚಯಿಸು. ಹೀಗೆಯೇ ಇಂದ್ರಿಯಗಳನ್ನು ನೋಡುತ್ತಿರುವ ನಾನು ಇಂದ್ರಿಯಗಳಲ್ಲವೆಂದು ನಿಶ್ಚಯಿಸು ; ಮನಸ್ಸು, ಬುದ್ಧಿ, ಪ್ರಾಣ- ಇವುಗಳೂ ನಾನಲ್ಲ ಎಂದು ನಿಶ್ಚಯಿಸು. ಇದರಂತೆ ದೇಹೇಂದ್ರಿಯಗಳ ಗುಂಪೂ ನಾನಲ್ಲವೆಂದು ದೃಶ್ಯವಾದದ್ದೆಲ್ಲಕ್ಕಿಂತಲೂ ಬೇರೆಯ ಸ್ವರೂಪನಾದ ದ್ರಷ್ಟೃವನ್ನು ಅನುಮಾನಪ್ರಮಾಣದಿಂದ[1] ಜಾಣತನದಿಂದ ಗೊತ್ತುಪಡಿಸಿಕೊ.

**ದೇಹೇನ್ದ್ರಿಯಾದಯೋ ಭಾವಾ ಹಾನಾದಿವ್ಯಾಪೃತಿಕ್ಷಮಾಃ ।**
**ಯಸ್ಯ ಸನ್ನಿಧಿಮಾತ್ರೇಣ ಸೋಽಹಮಿತ್ಯವಧಾರಯ ॥ ೧೮ ॥**

**ಅನಾಪನ್ನವಿಕಾರಃ ಸನ್ನಯಸ್ಕಾನ್ತವದೇವ ಯಃ ।**
**ಬುದ್ಧ್ಯಾದೀಂಶ್ಚಾಲಯತ್ಯೇವ[2] ಸೋಽಹಮಿತ್ಯವಧಾರಯ ॥ ೧೯ ॥**

---

1. ನಿಜವಾಗಿ ನೋಡಿದರೆ ಸಾಕ್ಷಿಯನ್ನು ಅನುಮಾನಪ್ರಮಾಣದಿಂದ ನಿಶ್ಚಯಿಸುವದು ಸರಿಯಲ್ಲ ; ಏಕೆಂದರೆ ಪ್ರಮಾಣಗಳಿಗಿಂತ ಪೂರ್ವದಲ್ಲಿಯೇ ಸಾಕ್ಷಿಯು ಸಿದ್ಧವಾಗಿರುತ್ತಾನೆ, ಮತ್ತು ಅವನಲ್ಲಿ ಯಾವ ಲಿಂಗಗಳೂ ಇರುವದೂ ಇಲ್ಲ. ಬ್ರ. ಸೂ. ಭಾ. ೧-೩-೭., ಬೃ. ಸಂಬಂಧಭಾಷ್ಯ- ಇವನ್ನು ನೋಡಿರಿ.

2. ‘ಚಾಲಯೇತ್ತ್ವಕ್’. ಪಾ ॥

ಅಜಡಾತ್ಮವದಾಭಾನ್ತಿ ಯತ್ಸಾನ್ನಿಧ್ಯಾಜ್ಜಡಾ ಅಪಿ ।
ದೇಹೇನ್ದ್ರಿಯಮನಃಪ್ರಾಣಾಃ ಸೋಽಹಮಿತ್ಯವಧಾರಯ ॥ ೨೦ ॥

ಅಗಮನ್ಮೇ ಮನೋಽನ್ಯತ್ರ ಸಾಂಪ್ರತಂ ಚ ಸ್ಥಿರೀಕೃತಮ್ ।
ಏವಂ ಯೋ ವೇದ ಧೀವೃತ್ತಿಂ ಸೋಽಹಮಿತ್ಯವಧಾರಯ ॥ ೨೧ ॥

ಸ್ವಪ್ನಜಾಗರಿತೇ ಸುಪ್ತಿಂ ಭಾವಾಭಾವೌ ಧಿಯಾಂ ತಥಾ ।
ಯೋ ವೇತ್ತ್ಯವಿಕ್ರಿಯಃ ಸಾಕ್ಷಾತ್ಸೋಽಹಮಿತ್ಯವಧಾರಯ ॥ ೨೨ ॥

ಘಟಾವಭಾಸಕೋ ದೀಪೋ ಘಟಾದನ್ಯೋ ಯಥೇಷ್ಯತೇ ।
ದೇಹಾವಭಾಸಕೋ ದೇಹೀ ತಥಾಹಂ ಬೋಧವಿಗ್ರಹಃ ॥ ೨೩ ॥

ಪುತ್ರವಿತ್ತಾದಯೋ[1] ಭಾವಾ ಯಸ್ಯ ಶೇಷತಯಾ ಪ್ರಿಯಾಃ ।
ದ್ರಷ್ಟಾ ಸರ್ವಪ್ರಿಯತಮಃ ಸೋಽಹಮಿತ್ಯವಧಾರಯ ॥ ೨೪ ॥

ಪರಪ್ರೇಮಾಸ್ಪದತಯಾ ಮಾ ನ ಭೂವಮಹಂ ಸದಾ ।
ಭೂಯಾಸಮಿತಿ ಯೋ ದ್ರಷ್ಟಾ ಸೋಽಹಮಿತ್ಯವಧಾರಯ ॥ ೨೫ ॥

೧೮-೨೫. ಯಾವನ ಸನ್ನಿಧಿಯಿಂದಲೇ ದೇಹ, ಇಂದ್ರಿಯಗಳು- ಮುಂತಾದ ಪದಾರ್ಥಗಳು ಬಿಡುವದೇ[2] ಮುಂತಾದ ವ್ಯಾಪಾರವನ್ನು ನಡೆಯಿಸುವದಕ್ಕೆ ಸಮರ್ಥವಾಗಿರುವವೋ ಅವನೇ ನಾನೆಂದು ನಿಶ್ಚಯಿಸು. ಯಾವನು ಅಯಸ್ಕಾಂತಶಿಲೆಯಂತೆಯೇ ತಾನು ಯಾವ ವಿಕಾರವನ್ನೂ ಹೊಂದದೆ ಅಂತಃಕರಣಾದಿಗಳು ತಮ್ಮ ತಮ್ಮ ವ್ಯಾಪಾರವನ್ನು ಮಾಡುವಂತೆ ಮಾಡುತ್ತಿರುವನೋ[3] ಅವನೇ ನಾನೆಂದು ನಿಶ್ಚಯಿಸು. ದೇಹ, ಇಂದ್ರಿಯ,

1. 'ಪುತ್ರಮಿತ್ರಾದಯೋ' ಪಾ॥ ಆ॥

2. ಬೇಡದ್ದನ್ನು ಬಿಟ್ಟು ಬೇಕಾದದ್ದನ್ನು ಗ್ರಹಿಸುವದೆಂಬುದಕ್ಕೆ ಸಂಸ್ಕೃತದಲ್ಲಿ ಹಾನೋಪಾದಾನಗಳೆನ್ನುವರು. ಈ ಹಾನೋಪಾದಾನಗಳು ಸಾಕ್ಷಿಚೈತನ್ಯಬಲದಿಂದಲೇ ದೇಹಾದಿಗಳಲ್ಲಿ ನಡೆಯುವವೆಂದು ಭಾವ.

3. 'ಚಾಲಯೇತ್ಪ್ರತ್ಯಕ್' ಎಂದೂ ಪಾಠವಿದೆ; ಅದು 'ಪ್ರತ್ಯಙ್' ಎಂದಿರಬೇಕು. ಅದನ್ನು 'ಯಾವ ಅಂತರಾತ್ಮನು' ಎಂದು ಕನ್ನಡಿಸಬೇಕು.

ಮನಸ್ಸು, ಪ್ರಾಣ- ಇವುಗಳು ಜಡವಾಗಿದ್ದರೂ ಯಾವಾತನ ಬಳಿಯಲ್ಲಿರುವ ದರಿಂದ ತಾವೂ ಚೈತನ್ಯರೂಪವಾಗಿರುವಂತೆ ತೋರುವವೋ ಅವನೇ ನಾನು- ಎಂದು ನಿಶ್ಚಯಿಸು. 'ನನ್ನ ಮನಸ್ಸು ಎಲ್ಲಿಯೋ ಹೋಗಿತ್ತು, ಈಗ ಸ್ಥಿರವಾಯಿತು' ಎಂದೀ ಪರಿಯಲ್ಲಿ ಯಾವನು ಅಂತಃಕರಣವೃತ್ತಿಯನ್ನು ತಿಳಿದುಕೊಳ್ಳುತ್ತಿರುವನೋ ಅವನೇ ನಾನು- ಎಂದು ನಿಶ್ಚಯಿಸು. ಎಚ್ಚರ ಕನಸುಗಳನ್ನೂ ಗಾಢನಿದ್ರೆಯನ್ನೂ ಅಂತಃಕರಣವೃತ್ತಿಗಳು ಇರುವದು, ಇಲ್ಲದ್ದು- ಇವುಗಳನ್ನೂ ಯಾವನು ಯಾವದೊಂದು ವಿಕಾರವನ್ನೂ ಪಡೆ ಯದೆ ನೇರಾಗಿ ಅರಿಯುತ್ತಿರುವನೋ ಅವನೇ ನಾನು- ಎಂದು ನಿಶ್ಚಯಿಸು. ಗಡಿಗೆಯನ್ನು ಬೆಳಗುವ ದೀಪವು ಗಡಿಗೆಗಿಂತ ಹೇಗೆ ಬೇರೆಯೆಂದು ಒಪ್ಪುವೆವೋ, ಅದರಂತೆ ದೇಹವನ್ನು ಬೆಳಗುತ್ತಿರುವ ದೇಹಿಯಾದ ಚೈತನ್ಯಸ್ವರೂಪನಾದ ನಾನೂ ದೇಹಕ್ಕಿಂತ ಬೇರೆಯಾಗಿರುವೆನು ; ಮಗನು, ಹಣ- ಮುಂತಾದವುಗಳು ಯಾವನಿಗಾಗಿಯೇ ಪ್ರಿಯವಾಗಿರುವವೋ' ಅಂಥ ಎಲ್ಲಕ್ಕಿಂತಲೂ ಅತ್ಯಂತ ಪ್ರಿಯನಾದ ದ್ರಷ್ಟೃವೇ ನಾನು- ಎಂದು ನಿಶ್ಚಯಿಸು. ಹೆಚ್ಚಿನ ಪ್ರೇಮಕ್ಕೆ ವಿಷಯನಾಗಿದ್ದುಕೊಂಡು 'ನಾನು ಇಲ್ಲದೆ ಹೋಗಬಾರದು, ಯಾವಾಗಲೂ ಇದ್ದೇ ಇರಬೇಕು' ಎಂದು ಭಾವಿಸುವ ದ್ರಷ್ಟೃವೇ ನಾನು ಎಂದು ನಿಶ್ಚಯಿಸು.[2]

1. ಬೃ. ೧-೪-೮ರ ಸೂಚನೆ

2. ಸಾಕ್ಷಿಚೈತನ್ಯಸ್ವರೂಪನಾದ ಆತ್ಮನು ಕೂಟಸ್ಥನಿರ್ವಿಕಾರನು, ಸಕಲವಿಕಾರಗಳಿಗೂ ಆಧಾರನು, ಜಡಪದಾರ್ಥಗಳಿಗೂ ತನ್ನ ಬೆಳಕನ್ನು ಕೊಡುವ ಅವುಗಳಿಗಿಂತ ಬೇರೆಯ ಸ್ವರೂಪವುಳ್ಳ ನಿತ್ಯಾವಿಕ್ರಿಯಚೈತನ್ಯಮಾತ್ರನು, ಪರಮಪ್ರೇಮಕ್ಕೆ ಆಸ್ಪದನಾಗಿರುವ ನಿತ್ಯಾನಂದಸ್ವರೂಪನು- ಎಂದು ಇಲ್ಲಿಯವರೆಗೆ ನಿರ್ಣಯವಾದಂತಾಯಿತು.

**ಯಃಸಾಕ್ಷಿ ಲಕ್ಷಣೋ ಬೋಧಸ್ತ್ವಂ ಪದಾರ್ಥಃ ಸ ಉಚ್ಯತೇ ।**
**ಸಾಕ್ಷಿತ್ವಮಪಿ ಬೋದ್ಧೃತ್ವಮವಿಕಾರಿತಯಾತ್ಮನಃ ॥ ೨೬ ॥**

**ದೇಹೇನ್ದ್ರಿಯಮನಃಪ್ರಾಣಾಹಙ್ಕೃತಿಭ್ಯೋ ವಿಲಕ್ಷಣಃ ।**
**ಪ್ರೋಜ್ಝಿತಾಶೇಷಷಡ್ಭಾವವಿಕಾರಸ್ತ್ವಂಪದಾಭಿಧಃ ॥ ೨೭ ॥**

೨೬-೨೭. ಸಾಕ್ಷಿರೂಪವಾದ ಚೈತನ್ಯವಿದೆಯಷ್ಟೆ, ಅದು ತ್ವಂಪದದ ಅರ್ಥವೆನಿಸುತ್ತದೆ, ಆತ್ಮನು ಸಾಕ್ಷಿಯೆಂಬುದೂ ಅರಿಯುವವನೆಂಬುದೂ, ಆತ್ಮನಿಗೆ ಯಾವದೊಂದು ವಿಕಾರವೂ ಇಲ್ಲದೆ[1] ಆಗಿರುವವಾಗಿವೆ. ದೇಹ, ಇಂದ್ರಿಯ, ಪ್ರಾಣ, ಅಹಂಕಾರ-ಇವುಗಳಿಗಿಂತ ಬೇರೆಯ ಸ್ವರೂಪದವನಾಗಿರುವ ಷಡ್ಭಾವವಿಕಾರಗಳಿಲ್ಲದ[2] ಆತ್ಮನೇ ತ್ವಂಪದದ ಅರ್ಥವು.

**ತ್ವಮರ್ಥಮೇವಂ ನಿಶ್ಚಿತ್ಯ ತದರ್ಥಂ ಚಿನ್ತಯೇತ್ಪುನಃ ।**
**ಅತದ್ವ್ಯಾವೃತ್ತಿರೂಪೇಣ ಸಾಕ್ಷಾದ್ವಿಧಿಮುಖೇನ ಚ ॥ ೨೮ ॥**

**ನಿರಸ್ತಾಶೇಷಸಂಸಾರದೋಷೋಽಸ್ಥೂಲಾದಿಲಕ್ಷಣಃ ।**
**ಅದೃಶ್ಯತ್ವಾದಿಗುಣಕಃ ಪರಾಕೃತತಮೋ ಮಲಃ ॥ ೨೯ ॥**

**ನಿರಸ್ತಾತಿಶಯಾನನ್ದಃ ಸತ್ಯಃ[3] ಪ್ರಜ್ಞಾನವಿಗ್ರಹಃ ।**
**ಸತ್ತಾಸ್ವಲಕ್ಷಣಃ ಪೂರ್ಣಃ ಪರಮಾತ್ಮೇತಿ ಗೀಯತೇ ॥ ೩೦ ॥**

---

1. ಸಾಕ್ಷಿಯೆಂದರೆ ನೇರಾಗಿ ನೋಡುವವನು, ಅರಿಯುವಾತನೆಂದರೆ ಅರಿಯುವ ಕ್ರಿಯೆಯ ಕರ್ತೃ - ಎಂದು ಆತ್ಮನನ್ನು ವಿಕಾರಿಯಾಗಿ ಎಣಿಸಬಾರದು; 'ಸೂರ್ಯನು ಬೆಳಗುತ್ತಾನೆ' ಎಂಬಂತೆ ಸ್ವರೂಪವನ್ನೇ ಸಾಕ್ಷಿ, ಬೋದ್ಧೃ - ಎಂದು ಕರೆದಿರುತ್ತದೆಯೆಂದು ತಿಳಿಯಬೇಕು- ಎಂದು ಭಾವ.

2. ಇದೆ, ಹುಟ್ಟುತ್ತದೆ, ಮಾರ್ಪಾಡುತ್ತದೆ, ಬೆಳೆಯುತ್ತದೆ, ಸವೆಯುತ್ತದೆ, ನಾಶವಾಗುತ್ತದೆ- ಎಂಬ ಆರು ವಿಕಾರಗಳು.

3. 'ಸತ್ಯಪ್ರಜ್ಞಾನವಿಗ್ರಹಃ' ಪಾ॥ ೬॥

೨೮-೩೦. ಈ ರೀತಿಯಲ್ಲಿ ತ್ವಂಪದದ ಅರ್ಥವನ್ನು ನಿಶ್ಚಯಿಸಿದ ಬಳಿಕ ಅದಲ್ಲದ್ದನ್ನು ತೆಗೆದುಹಾಕುವ ರೀತಿಯಿಂದಲೂ[1] ಸಾಕ್ಷಾತ್ತಾಗಿ ವಿಧಿ ಮುಖವಾಗಿಯೂ[2] ತತ್ಪದದ ಅರ್ಥವನ್ನು ಚಿಂತಿಸಬೇಕು. ಯಾವ ಸಂಸಾರ ದೋಷಗಳೂ ಇಲ್ಲದೆ[3] ಸ್ಥೂಲವಲ್ಲದಿರುವದೇ ಮುಂತಾದ ಸ್ವರೂಪ ದವನಾಗಿ[4] ಅದೃಶ್ಯನಾಗಿರುವದೇ[5] ಮುಂತಾದ ಗುಣಗಳುಳ್ಳವನೂ ಅವಿದ್ಯಾ ಮಲರಹಿತನಾಗಿರುವವನೂ[6] ಮಿಗಿಲಿಲ್ಲದ ಆನಂದದ ಸ್ವರೂಪನಾಗಿರುವ ವನೂ ಪರಮಾರ್ಥಸತ್ಯಸ್ವರೂಪನೂ ಚೈತನ್ಯರೂಪನೂ[7] ಆಗಿರುವ ಕೇವಲ ಸದ್ರೂಪನಾಗಿರುವ ಪೂರ್ಣಾತ್ಮನೇ ಪರಮಾತ್ಮನೆನಿಸುವನು.

**ಸರ್ವಜ್ಞತ್ವಂ ಪರೇಶತ್ವಂ ತಥಾ ಸಮ್ಪೂರ್ಣಶಕ್ತಿತಾ ।**
**ವೇದೈಃ ಸಮರ್ಥ್ಯತೇ ಯಸ್ಯ ತದ್ಬ್ರಹ್ಮೇತ್ಯವಧಾರಯ ॥ ೩೧ ॥**

**ಯಜ್ಞಾನಾತ್ಸರ್ವವಿಜ್ಞಾನಂ ಶ್ರುತಿಷು ಪ್ರತಿಪಾದಿತಮ್ ।**
**ಮೃದಾದ್ಯನೇಕದೃಷ್ಟಾನ್ತೈಸ್ತದ್ಬ್ರಹ್ಮೇತ್ಯವಧಾರಯ ॥ ೩೨ ॥**

**ಯದಾನನ್ತ್ಯಂ ಪ್ರತಿಜ್ಞಾಯ ಶ್ರುತಿಸ್ತತ್ಸಿದ್ಧಯೇ ಜಗೌ ।**
**ತತ್ಕಾರ್ಯತ್ವಂ ಪ್ರಪಞ್ಚಸ್ಯ ತದ್ಬ್ರಹ್ಮೇತ್ಯವಧಾರಯ ॥ ೩೩ ॥**

**ವಿಜಿಜ್ಞಾಸ್ಯತಯಾ ಯಚ್ಚ ವೇದಾನ್ತೇಷು ಮುಮುಕ್ಷುಭಿಃ ।**
**ಸಮರ್ಥ್ಯತೇಽತಿಯತ್ನೇನ ತದ್ಬ್ರಹ್ಮೇತ್ಯವಧಾರಯ ॥ ೩೪ ॥**

**ಜೀವಾತ್ಮನಾ ಪ್ರವೇಶಶ್ಚ ನಿಯನ್ತೃತ್ವಂ ಚ ತಾನ್ ಪ್ರತಿ ।**
**ಶ್ರೂಯತೇ ಯಸ್ಯ ವೇದೇಷು ತದ್ಬ್ರಹ್ಮೇತ್ಯವಧಾರಯ ॥ ೩೫ ॥**

**ಕರ್ಮಣಾಂ ಫಲದಾತೃತ್ವಂ ಯಸ್ಯೈವ ಶ್ರೂಯತೇ ಶ್ರುತೌ ।**
**ಜೀವಾನಾಂ ಹೇತುಕರ್ತೃತ್ವಂ ತದ್ಬ್ರಹ್ಮೇತ್ಯವಧಾರಯ ॥ ೩೬ ॥**

---

1. ಕಲ್ಪಿಸಿದ ರೂಪವನ್ನು ಇಲ್ಲವೆನ್ನುವದು ; ಬೃ. ೨-೩-೯.
2. ಇರುವ ಸ್ವರೂಪವನ್ನು ಹೇಳುವದು. ತೈ. ೨-೧.
3. ಛಾಂ. ೮-೭-೧. 4. ಬೃ. ೩-೮-೮. 5. ಮುಂ. ೧-೧-೬.
6. ಶ್ವೇ. ೫-೧. 7. ಬೃ. ೩-೯-೨೮, ತೈ. ೩-೬.

೩೧-೩೬. ಸರ್ವಜ್ಞತ್ವವೂ[1] ಪರಮೇಶ್ವರತ್ವವೂ[2] ಸಂಪೂರ್ಣವಾದ ಶಕ್ತಿಗಳುಳ್ಳದ್ದಾಗಿರುವದೂ[3] ಯಾವದರ ಧರ್ಮವೆಂದು ವೇದಗಳಲ್ಲಿ ಹೇಳಿರುತ್ತದೆಯೋ ಅದೇ ಬ್ರಹ್ಮವೆಂದು ನಿಶ್ಚಯಿಸು. ಯಾವದನ್ನು ತಿಳಿಯುವದರಿಂದ ಸರ್ವವನ್ನೂ ತಿಳಿದಂತಾಗುವದೆಂದು[4] ಮಣ್ಣಿನ ದೃಷ್ಟಾಂತವೇ ಮುಂತಾದ ಅನೇಕ ದೃಷ್ಟಾಂತಗಳಿಂದ ಹೇಳಿರುತ್ತದೆಯೋ ಅದೇ ಬ್ರಹ್ಮವೆಂದು ನಿಶ್ಚಯಿಸು. ಯಾವದನ್ನು ಅನಂತವೆಂದು ಹೇಳಿದ ಮೇಲೆ ಆ ಮಾತನ್ನು ಸಿದ್ಧಪಡಿಸುವದಕ್ಕೆಂದು ಪ್ರಪಂಚವು ಅದರ ಕಾರ್ಯವೆಂದು[5] ಹೇಳಿರುವದೋ ಅದೇ ಬ್ರಹ್ಮವೆಂದು ನಿಶ್ಚಯಿಸು. ಮುಮುಕ್ಷುಗಳಾದವರು ವಿಶೇಷಪ್ರಯತ್ನದಿಂದ ಅರಿತುಕೊಳ್ಳತಕ್ಕದ್ದೆಂದು[6] ಯಾವದನ್ನು ವೇದಾಂತವಚನಗಳಲ್ಲಿ ತಿಳಿಸಿರುತ್ತದೆಯೋ ಅದೇ ಬ್ರಹ್ಮವೆಂದು ನಿಶ್ಚಯಿಸು. ಜೀವರೂಪದಿಂದ ಪ್ರವೇಶಮಾಡಿರುವದೆಂದೂ[7] ಆ ಜೀವರುಗಳನ್ನು ನಿಯಮನಮಾಡುವದೆಂದೂ[8] ಯಾವದನ್ನು ವೇದಗಳಲ್ಲಿ ಹೇಳಿರುತ್ತದೆಯೋ ಅದೇ ಬ್ರಹ್ಮವೆಂದು ನಿಶ್ಚಯಿಸು. ಕರ್ಮಗಳಿಗೆ ಫಲವನ್ನು ಕೊಡುವದೆಂದೂ[9] ಜೀವರುಗಳನ್ನು ಪ್ರೇರಿಸುವ ಕರ್ತೃವೆಂದೂ[10] ಯಾವದನ್ನೇ ಶ್ರುತಿಯಲ್ಲಿ ಹೇಳಿರುತ್ತದೆಯೋ ಅದನ್ನು ಬ್ರಹ್ಮವೆಂದು ನಿಶ್ಚಯಿಸು.

**ತತ್ತ್ವಂ ಪದಾರ್ಥೌ ನಿರ್ಣೀತೌ ವಾಕ್ಯಾರ್ಥಶ್ಚಿನ್ತ್ಯತೇಽಧುನಾ ।**
**ತಾದಾತ್ಮ್ಯಮತ್ರ ವಾಕ್ಯಾರ್ಥಸ್ತಯೋರೇವ ಪದಾರ್ಥಯೋಃ ॥ ೩೭॥**

---

1. ಮುಂ. ೧-೧-೯ 2. ಶ್ವೇ. ೬-೭.
3. ಶ್ವೇ. ೬-೮ 4. ಛಾಂ. ೬-೧-೨, ೩.
5. ತೈ. ೨-೧ 6. ತೈ. ೩-೧
7. ಛಾಂ. ೬-೩-೨ 8. ಬೃ. ೩-೭-೩ ರಿಂದ ೨೩.
9. ಬೃ. ೪-೪-೨೪. 10. ಕೌ. ೩-೯.

* **ಸಂಸರ್ಗೋ ವಾ ವಿಶಿಷ್ಟೋ ವಾ ವಾಕ್ಯಾರ್ಥೋ ನಾತ್ರ ಸಮ್ಮತಃ ।**
**ಅಖಣ್ಡೈಕರಸತ್ವೇನ ವಾಕ್ಯಾರ್ಥೋ ವಿದುಷಾಂ ಮತಃ ॥ ೩೮ ॥**
* **ಪ್ರತ್ಯಗ್ಬೋಧೋ ಯ ಆಭಾತಿ ಸೋಽದ್ವಯಾನನ್ದಲಕ್ಷಣಃ ।**
**ಅದ್ವಯಾನನ್ದರೂಪಶ್ಚ ಪ್ರತ್ಯಗ್ಬೋಧೈಕಲಕ್ಷಣಃ ॥ ೩೯ ॥**

೩೭-೩೯. ತತ್ಪದದ ಮತ್ತು ಪದದ ಅರ್ಥಗಳನ್ನು ಗೊತ್ತುಪಡಿಸಿದ್ದಾಯಿತು. ಈಗ ವಾಕ್ಯಾರ್ಥವನ್ನು ಕುರಿತು ವಿಚಾರಮಾಡಲಾಗುತ್ತದೆ. ಈ ಎರಡು ಪದಾರ್ಥಗಳಿಗೂ ತಾದಾತ್ಮ್ಯವೇ ಇಲ್ಲಿ ವಾಕ್ಯಾರ್ಥವು. ಇಲ್ಲಿ ಸಂಸರ್ಗವಾಗಲಿ[1] ವಿಶಿಷ್ಟವಾಗಲಿ[2] ವಾಕ್ಯಾರ್ಥವೆಂದು ಒಪ್ಪಿರುವದಿಲ್ಲ ; ಅಖಂಡೈಕರಸವೇ[3] ವಾಕ್ಯದರ್ಥವೆಂದು ತಿಳಿದವರು ಒಪ್ಪಿರುತ್ತಾರೆ. ಒಳಗಿನ ಚೈತನ್ಯವಾಗಿ ಯಾವ ಆತ್ಮನು ತೋರುತ್ತಿರುವನೋ ಆತನೇ ಅದ್ವಯಾನಂದ ಸ್ವರೂಪಬ್ರಹ್ಮವಾಗಿರುತ್ತಾನೆ ; ಯಾವದು ಅದ್ವಯಾನಂದರೂಪವಾಗಿರುವ ಬ್ರಹ್ಮವೋ ಅದೇ ಒಳಗಿನ ಚೈತನ್ಯಮಾತ್ರನಾದ ಆತ್ಮನಾಗಿರುವದು.[4]

---

1. ಸಂಸರ್ಗವೆಂದರೇನೆಂಬ ಬಗ್ಗೆ ವ್ಯಾಖ್ಯಾನಕಾರರಲ್ಲಿ ಮತಭೇದವಿರುವದು. ಸಂಸರ್ಗವೆಂಬ ಶಬ್ದಕ್ಕೆ ಸಂಬಂಧವೆಂದು ಅರ್ಥವಾಗುತ್ತದೆ. 'ದೇವದತ್ತನು ಎತ್ತನ್ನು ಕೋಲಿನಿಂದ ಹೊಡೆಯುತ್ತಾನೆ' ಎಂಬ ವಾಕ್ಯದಲ್ಲಿ ಕಾರಕಗಳಿಗೂ ಕ್ರಿಯೆಗೂ ಸಂಬಂಧವು ತೋರುವದರಿಂದ ವಾಕ್ಯವು ಸಂಸರ್ಗವನ್ನು ಹೇಳುತ್ತದೆಯೆಂದು ಇಟ್ಟುಕೊಳ್ಳಬಹುದು.

2. ನೈದಿಲೆಯು ಕಪ್ಪು- ಎಂಬಲ್ಲಿ ವಿಶೇಷಣದಿಂದ ಕೂಡಿದ ವಿಶೇಷ್ಯವನ್ನು ಹೇಳುವದರಿಂದ ವಿಶಿಷ್ಟವೇ ವಾಕ್ಯಾರ್ಥವೆಂದು ಹೇಳಬಹುದು.

3. ತತ್ತ್ವಮಸಿ (ಅದೇ ನೀನಾಗಿರುವೆ) ಎಂಬ ವಾಕ್ಯದಲ್ಲಿ ನೀನು, ಅದು- ಎಂಬ ಎರಡು ಬೇರೆಬೇರೆ ಪದಾರ್ಥಗಳ ಸಂಬಂಧವನ್ನೂ ಹೇಳಿರುವದಿಲ್ಲ, ಇವೆರಡರಲ್ಲಿ ಒಂದು ಮತ್ತೊಂದಕ್ಕೆ ವಿಶೇಷಣವೆಂದೂ ಹೇಳಿಲ್ಲ ; ಒಂದೇ ವಸ್ತುವನ್ನು ಎರಡು ಪದಗಳೂ ಬೇರೆ ಬೇರೆಯ ದೃಷ್ಟಿಯಿಂದ ಹೇಳುತ್ತವೆ. ಇದನ್ನೇ ಅಖಂಡೈಕರಸವೆನ್ನುತ್ತಾರೆ.

4. ಅಖಂಡೈಕರಸವೇ ವಾಕ್ಯದ ಅರ್ಥವೆಂಬುದು ಹೇಗೆಂಬುದನ್ನು ತಿಳಿಸುವದಕ್ಕೆ ಈ ವಾಕ್ಯವು ಬಂದಿರುತ್ತದೆ.

*** ಇತ್ಥಮನ್ಯೋನ್ಯತಾದಾತ್ಮ್ಯ ಪ್ರತಿಪತ್ತಿರ್ಯದಾ ಭವೇತ್ ।**
**ಅಬ್ರಹ್ಮತ್ವಂ ತ್ವಮರ್ಥಸ್ಯ ವ್ಯಾವರ್ತೇತ ತದೈವ ಹಿ ॥೪೦॥**

*** ತದರ್ಥಸ್ಯ ಚ ಪಾರೋಕ್ಷ್ಯಂ ಯದ್ಯೇವಂ ಕಿಂ ತತಃ ಶೃಣು ।**
**ಪೂರ್ಣಾನನ್ದೈಕರೂಪೇಣ ಪ್ರತ್ಯಗ್ಬೋಧೋಽವತಿಷ್ಠತೇ ॥೪೧॥**

೪೦-೪೧. ಈ ರೀತಿಯಲ್ಲಿ ಪರಸ್ಪರತಾದಾತ್ಮ್ಯವನ್ನು ಯಾವಾಗ ತಿಳಿದುಕೊಳ್ಳುತ್ತಾನೋ ಆಗಲೇ ತ್ವಂಪದಾರ್ಥದಲ್ಲಿ ಅಬ್ರಹ್ಮತ್ವವು ಹೋಗಿಬಿಡುವದು, ತತ್ಪದಾರ್ಥದಲ್ಲಿ ಪಾರೋಕ್ಷತ್ವವೂ ಹೋಗಿಬಿಡುವದು. ಆದರೇನೆನ್ನುವೆಯೊ ? ಅದನ್ನು ಹೇಳುವೆನು, ಕೇಳು : ಪ್ರತ್ಯಕ್ಚೈತನ್ಯವಾದ ನಮ್ಮ ಆತ್ಮನು ಪೂರ್ಣಾನಂದರೂಪವಾದ ಬ್ರಹ್ಮವೇ ಆಗಿ ನಿಂತುಬಿಡುತ್ತಾನೆ.

**ತತ್ತ್ವಮಸ್ಯಾದಿವಾಕ್ಯಂ ಚ ತಾದಾತ್ಮ್ಯಪ್ರತಿಪಾದನೇ ।**
**ಲಕ್ಷ್ಯೌ ತತ್ತ್ವಂಪದಾರ್ಥೌ ದ್ವಾವುಪಾದಾಯ ಪ್ರವರ್ತತೇ ॥೪೨॥**
**ಹಿತ್ವಾ ದ್ವೌ ಶಬಲೌ ವಾಚ್ಯೌ ವಾಕ್ಯಂ ವಾಕ್ಯಾರ್ಥಬೋಧನೇ ।**
**ಯಥಾ ಪ್ರವರ್ತತೇಽಸ್ಮಾಭಿಸ್ತಥಾ ವ್ಯಾಖ್ಯಾತಮಾದರಾತ್ ॥೪೩॥**

೪೨-೪೩. 'ತತ್ತ್ವಮಸಿ' ಮುಂತಾದ ವಾಕ್ಯವು ತತ್ಪದ ತ್ವಂಪದಗಳ ಲಕ್ಷ್ಯಾರ್ಥವನ್ನು ತೆಗೆದುಕೊಂಡು ಅವುಗಳ ತಾದಾತ್ಮ್ಯವನ್ನು ಹೇಳುವದಕ್ಕೆ ಹೊರಟಿರುತ್ತದೆ. ವಿಶಿಷ್ಟಾರ್ಥಗಳಾದ ವಾಚ್ಯಾರ್ಥಗಳೆರಡನ್ನೂ ಬಿಟ್ಟು ವಾಕ್ಯಾರ್ಥವನ್ನು ಹೇಳುವದಕ್ಕೆ ಹೇಗೆ ವಾಕ್ಯವು ಹೊರಟಿದೆಯೆಂಬುದನ್ನು ನಾವು ಆದರದಿಂದ ಹಿಂದೆ (೩೯ನೆಯ ಶ್ಲೋಕದಲ್ಲಿ) ಸ್ಪಷ್ಟವಾಗಿ ಹೇಳಿರುತ್ತೇವೆ.[1]

1. ವಿಶ್ವೇಶ್ವರಟೀಕೆಯನ್ನನುಸರಿಸಿ 'ಈ ವಿಷಯವನ್ನು ೩೯ನೆಯ ಶ್ಲೋಕದಲ್ಲಿ ಹೇಳಿದೆ'ಯೆಂದು ಅರ್ಥಮಾಡಿದೆ. ಈ ವಿಚಾರಕ್ಕೆ ಪೀಠಿಕೆಯನ್ನು ನೋಡಿರಿ.

★ ಆಲಮ್ಬನತಯಾ ಭಾತಿ ಯೋಽಸ್ಮತ್ಪ್ರತ್ಯಯಶಬ್ದಯೋಃ ।
ಅನ್ತಃಕರಣಸಂಭಿನ್ನಬೋಧಃ ಸ ತ್ವಂಪದಾಭಿದಃ ॥ ೪೪ ॥

★ ಮಾಯೋಪಾಧಿರ್ಜಗದ್ಯೋನಿಃ ಸರ್ವಜ್ಞತ್ವಾದಿಲಕ್ಷಣಃ ।
ಪಾರೋಕ್ಷ್ಯಶಬಲಃ ಸತ್ಯಾದ್ಯಾತ್ಮಕಸ್ತತ್ಪದಾಭಿಧಃ ॥ ೪೫ ॥

ಪ್ರತ್ಯಕ್ಪರೋಕ್ಷತೈಕಸ್ಯ ಸದ್ವಿತೀಯತ್ವಪೂರ್ಣತಾ ।
ವಿರುಧ್ಯತೇ ಯತಸ್ತಸ್ಮಾಲ್ಲಕ್ಷಣಾ ಸಂಪ್ರವರ್ತತೇ ॥ ೪೬ ॥

ಮಾನಾನ್ತರವಿರೋಧೇ ತು ಮುಖ್ಯಾರ್ಥಸ್ಯ ಪರಿಗ್ರಹೇ[1] ।
ಮುಖ್ಯಾರ್ಥೇನಾವಿನಾಭೂತೇ ಪ್ರತೀತಿರ್ಲಕ್ಷಣೋಚ್ಯತೇ ॥ ೪೭ ॥

★ ತತ್ತ್ವಮಸ್ಯಾದಿವಾಕ್ಯೇಷು ಲಕ್ಷಣಾ ಭಾಗಲಕ್ಷಣಾ ।
ಸೋಽಯಮಿತ್ಯಾದಿವಾಕ್ಯಸ್ಥ ಪದಯೋರಿವ ನಾಪರಾ ॥ ೪೮ ॥

೪೪-೪೮. ನಾನು ಎಂಬ ಅರಿವು ಮತ್ತು ಶಬ್ದ- ಇವುಗಳಿಗೆ ವಿಷಯವಾಗಿರುವ ಅಂತಃಕರಣವಿಶಿಷ್ಟಚೈತನ್ಯವಿದೆಯಲ್ಲ, ಅದೇ ತ್ವಂಪದಕ್ಕೆ ವಾಚ್ಯಾರ್ಥವು. ಮಾಯೆಯೆಂಬ ಉಪಾಧಿಯುಳ್ಳವನಾಗಿ ಪ್ರಪಂಚಕ್ಕೆ ಕಾರಣನಾಗಿಯೂ ಸರ್ವಜ್ಞತ್ವವೇ ಮುಂತಾದವುಗಳಿಂದೊಡಗೂಡಿದವನಾಗಿಯೂ ಪರೋಕ್ಷತೆಯಿಂದ ಕೂಡಿದವನಾಗಿಯೂ ಸತ್ಯವೇ ಮುಂತಾದ ಸ್ವರೂಪದವನಾಗಿಯೂ ಇರುವ ಈಶ್ವರನು ತತ್ಪದಕ್ಕೆ ವಾಚ್ಯಾರ್ಥವು. ಒಬ್ಬನೇ ಪ್ರತ್ಯಗಾತ್ಮನಾಗಿರುವದು, ಪರೋಕ್ಷವಾಗಿರುವದು- ಇವೂ ; ಎರಡನೆಯ ವಸ್ತುವಿನಿಂದೊಡಗೂಡಿರುವದು, ಪೂರ್ಣನೂ ಆಗಿರುವದು- ಇವೂ ಒಂದಕ್ಕೊಂದು ವಿರುದ್ಧವಾಗಿರುವದರಿಂದ ಇಲ್ಲಿ ಲಕ್ಷಣೆಯು ಬರುತ್ತದೆ. ಮುಖ್ಯಾರ್ಥವನ್ನು ಸ್ವೀಕರಿಸುವದು ಮತ್ತೊಂದು ಪ್ರಮಾಣಕ್ಕೆ ವಿರುದ್ಧವಾಗಿದ್ದರೆ ಮುಖ್ಯಾರ್ಥಕ್ಕೆ ಸಂಬಂಧಪಟ್ಟೇ ಇರುವ ಮತ್ತೊಂದು ಅರ್ಥವನ್ನು ಅರಿಯುವದು **ಲಕ್ಷಣೆ**ಯೆನಿಸುವದು. 'ತತ್ತ್ವಮಸಿ'

[1] ವಾಕ್ಯಾರ್ಥಸ್ಯಾಪರಿಗ್ರಹೇ ಪಾ ॥ ಆ ।

ಮುಂತಾದ ವಾಕ್ಯಗಳಲ್ಲಿರುವ ಲಕ್ಷಣೆಯು 'ಅವನೇ ಇವನು' ಮುಂತಾದ ವಾಕ್ಯಗಳಲ್ಲಿರುವ ಪದಗಳಿಗೆ ಹೇಗೋ ಹಾಗೆ **ಭಾಗಲಕ್ಷಣೆ**ಯಾಗಿರುತ್ತದೆಯೇ[1] ಹೊರತು ಮತ್ತೊಂದಲ್ಲ.

**ಅಹಂ ಬ್ರಹ್ಮೇತಿ ವಾಕ್ಯಾರ್ಥಬೋಧೋ ಯಾವದ್ದೃಢೀ ಭವೇತ್ ।**
**ಶಮಾದಿಸಹಿತಸ್ತಾವದಭ್ಯಸೇಚ್ಛ್ರವಣಾದಿಕಮ್ ॥ ೪೯ ॥**
**ಶ್ರುತ್ಯಾಚಾರ್ಯಪ್ರಸಾದೇನ ದೃಢೋ ಬೋಧೋ[2] ಯದಾ ಭವೇತ್ ।**
**ನಿರಸ್ತಾಶೇಷಸಂಸಾರನಿದಾನಃ ಪುರುಷಸ್ತದಾ ॥ ೫೦ ॥**
**ವಿಶೀರ್ಣಕಾರ್ಯಕರಣೋ ಭೂತಸೂಕ್ಷ್ಮೈರನಾವೃತಃ ।**
**ವಿಮುಕ್ತಕರ್ಮನಿಗಡಃ[3] ಸದ್ಯ ಏವ ವಿಮುಚ್ಯತೇ ॥ ೫೧ ॥**

೪೯-೫೧. ನಾನು ಬ್ರಹ್ಮವು ಎಂಬ ವಾಕ್ಯಾರ್ಥದ ಭಾವವು ಯಾವಾಗ್ಗೆ ದೃಢವಾಗುವದೋ ಅಲ್ಲಿಯವರೆಗೂ ಶಮವೇ ಮುಂತಾದ ಸಾಧನಗಳಿಂದೊಡಗೂಡಿ ಶ್ರವಣಾದಿಗಳನ್ನು[4] ಅಭ್ಯಾಸಮಾಡಬೇಕು. ಶ್ರುತಿಯ ಮತ್ತು ಆಚಾರ್ಯರ ಅನುಗ್ರಹದಿಂದ ಯಾವಾಗ ದೃಢವಾದ ಜ್ಞಾನವುಂಟಾಗುವದೋ ಆಗ ಮನುಷ್ಯನಿಗೆ ಎಲ್ಲಾ ಸಂಸಾರಕಾರಣವೂ ತೊಲಗುವದು. ಅಂಥವನು ದೇಹೇಂದ್ರಿಯಗಳನ್ನು ಸಡಿಲಿಸಿಕೊಂಡು

---

1. 'ಅವನೇ ಇವನು' ಎಂಬ ವಾಕ್ಯದಲ್ಲಿ ಆ ಕಾಲದಲ್ಲಿದ್ದವನು, ಈ ಕಾಲದಲ್ಲಿರುವವನು- ಎಂಬುದೇ ಮುಂತಾದ ವಿರುದ್ಧವಾದ ಭಾವನೆಗಳನ್ನು ಬಿಟ್ಟು ಉಳಿದ ವ್ಯಕ್ತಿಯೊಬ್ಬನನ್ನೇ ಗ್ರಹಿಸುವಂತೆ 'ತತ್ತ್ವಮಸಿ' ಎಂಬಲ್ಲಿ ೪೬ನೆಯ ಶ್ಲೋಕದಲ್ಲಿ ಹೇಳಿದ ವಿರೋಧಗಳನ್ನು ಕಳೆದು ಉಳಿದ ಚೈತನ್ಯವೊಂದನ್ನೇ ಗ್ರಹಿಸಬೇಕು. ಹೀಗೆ ಅರ್ಥದಲ್ಲಿ ಒಂದು ಭಾಗವನ್ನು ಬಿಟ್ಟು ಒಂದು ಭಾಗವನ್ನು ಗ್ರಹಿಸುವದರಿಂದ ಇದು ಭಾಗತ್ಯಾಗಲಕ್ಷಣೆ ಅಥವಾ ಭಾಗಲಕ್ಷಣೆ ಎನಿಸುವದು. ಪೀಠಿಕೆಯನ್ನು ನೋಡಿ.
2. 'ದೃಢಬೋಧೋ' ಪಾ॥ ಓ॥
3. 'ಕರ್ಮನಿಗಲಃ' ಪಾ॥ ಓ॥
4. ಶ್ರವಣ, ಮನನ, ನಿದಿಧ್ಯಾಸನ- ಇವುಗಳನ್ನು.

ಸೂಕ್ಷ್ಮಭೂತಗಳ ಮುಸುಕು ಇಲ್ಲದೆಯೇ[1] ಕರ್ಮವೆಂಬ ಬೇಡಿಯಿಂದ ಕೂಡಲೆ ಮುಕ್ತಿಯನ್ನು[2] ಹೊಂದುತ್ತಾನೆ.

**ಪ್ರಾರಬ್ಧಕರ್ಮವೇಗೇನ ಜೀವನ್ಮುಕ್ತೋ ಯದಾ ಭವೇತ್ ।**
**ಕಿಂಚಿತ್ಕಾಲಮನಾರಬ್ಧಕರ್ಮಬನ್ಧಸ್ಯ ಸಂಕ್ಷಯೇ ॥ ೫೨ ॥**
**ನಿರಸ್ತಾತಿಶಯಾನನ್ದಂ ವೈಷ್ಣವಂ ಪರಮಂ ಪದಮ್ ।**
**ಪುನರಾವೃತ್ತಿರಹಿತಂ ಕೈವಲ್ಯಂ ಪ್ರತಿಪದ್ಯತೇ ॥ ೫೩ ॥**

೫೨-೫೩. ಅನಾರಬ್ಧಕರ್ಮವು[3] ನಾಶವಾಗಿ ಪ್ರಾರಬ್ಧಕರ್ಮದ

---

1. ಜೀವನು ಜ್ಞಾನದಿಂದ ಮುಕ್ತನಾಗುವವರೆಗೂ ಅವನಿಗೆ ಸೂಕ್ಷ್ಮಶರೀರದ ಮುಸುಕು ಇದ್ದೇ ಇರುತ್ತದೆಯೆಂದೂ ಮರಣವಾದಾಗ ಸ್ಥೂಲಶರೀರವನ್ನು ಇಲ್ಲಿಯೇ ಬಿಟ್ಟು ಈ ಸೂಕ್ಷ್ಮಶರೀರದ ಉಪಾಧಿಯೊಡನೆಯೇ ಹೊರಡುವನೆಂದೂ ದೇಶಾಂತರ ಲೋಕಾಂತರಗಳನ್ನು ಈ ದೇಹದೊಡನೆಯೇ ಅನುಭವಿಸುವನೆಂದೂ ಶಾಸ್ತ್ರವಚನವಿರುವದು. ಜ್ಞಾನವಾದಾಗ ಮಾತ್ರ ಈ ಮುಸುಕು ಇಲ್ಲವಾಗುತ್ತದೆಯೆಂದು ಭಾವ.

2. ಇದೇ ಸದ್ಯೋಮುಕ್ತಿಯು. ಜ್ಞಾನವು ಬಂದಕೂಡಲೆ ದೇಹಾದಿಬಂಧವು ನಾಶವಾಗುವದೆಂದು ಭಾವ. ಪೀಠಿಕೆಯನ್ನು ನೋಡಿ. ಇಲ್ಲಿ ವಿಶ್ವೇಶ್ವರ ವ್ಯಾಖ್ಯಾನಕಾರರು 'ದೇಹವಿದ್ದರೂ ವಿದೇಹಕೈವಲ್ಯ'ವೆಂದು ಅರ್ಥವನ್ನು ತೆಗೆದಿರುತ್ತಾರೆ. ಈ ವ್ಯಾಖ್ಯಾನವು ಮುಂದಿನ ಶ್ಲೋಕಕ್ಕೆ ಹೊಂದುಗಡೆಯಾಗುವದಿಲ್ಲ. ಪರಿಶಿಷ್ಟವನ್ನು ನೋಡಿ.

3. ಕರ್ಮವು ಆರಬ್ಧ, ಅನಾರಬ್ಧ- ಎಂದು ಎರಡುಬಗೆ. ಆರಬ್ಧವೆಂದರೆ ಫಲವನ್ನು ಕೊಡುವದಕ್ಕೆ ಆರಂಭಿಸಿರುವ ಕರ್ಮ ; ಅದು ಫಲದ ಅನುಭವವಾದ ಮೇಲೆ ನಾಶವಾಗುವದು. ಅನಾರಬ್ಧವೆಂದರೆ ಫಲವನ್ನು ಕೊಡುವದಕ್ಕೆ ಆರಂಭಿಸದೆ ಇರುವದು. ಇದರಲ್ಲಿ ಎರಡು ಬಗೆ. ಜ್ಞಾನವು ಬರುವದಕ್ಕಿಂತ ಹಿಂದೆ ಮಾಡಿರುವ ಸಂಚಿತಕರ್ಮವೊಂದು, ಆಮೇಲೆ ಮಾಡಬಹುದಾದ ಆಗಾಮಿಕರ್ಮವೊಂದು. ಈ ಎರಡು ಕರ್ಮಗಳೂ ಜ್ಞಾನದಿಂದಲೇ ನಿರ್ಜೀವವಾಗುವವೆಂದೂ ಜ್ಞಾನಬಲದಿಂದ ಸಂಚಿತವು ನಾಶವಾಗಿ ಆಗಾಮಿಕರ್ಮದ ಫಲವು ಅಂಟದಂತಾಗುವದೆಂದೂ ಬ್ರ. ಸೂ. ೪-೧-೧೩ ಮತ್ತು ೧೪ರಲ್ಲಿದೆ. ಬೃ. (೪-೪-೨೨) ಭಾಷ್ಯವನ್ನು ನೋಡಿ

ವೇಗದಿಂದ ಕೆಲವು ಕಾಲದವರೆಗೂ ಯಾವಾಗ ಜೀವನ್ಮುಕ್ತನಾಗಿರುವನೋ[1], ಆಗ (ಅದರ ಕೊನೆಯಲ್ಲಿ) ಮಿಗಿಲಿಲ್ಲವೆನಿಸುವಷ್ಟು ಆನಂದವುಳ್ಳ ವಿಷ್ಣುವಿನ ಪರಮಪದವೆನಿಸುವ[2] ಪುನರಾವೃತ್ತಿಯಿಲ್ಲದ ವಿದೇಹಕೈವಲ್ಯವನ್ನೇ ಹೊಂದುವನು.

**ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ**

**ಶ್ರೀಮಚ್ಛಂಕರಾಚಾರ್ಯಕೃತಾ**

**ವಾಕ್ಯವೃತ್ತಿಃ ಸಂಪೂರ್ಣಾ.**

1. ಜೀವನ್ಮುಕ್ತಿಯೆಂಬುದು ಬದುಕಿರುವಾಗಲೇ ಆಗುವ ಮುಕ್ತಿಯು. ಇದು ಗೌಣವೆಂದೂ ವಿದೇಹಮುಕ್ತಿಯೇ ಮುಖ್ಯವೆಂದೂ ಕೆಲವರು ವೇದಾಂತಿಗಳ ಮತವಿರುವದು. ಟೀಕೆಯನ್ನು ನೋಡಿ.

# ಲಘುವಾಕ್ಯವೃತ್ತಿ

**ಸ್ಥೂಲೋ ಮಾಂಸಮಯೋ ದೇಹೋ ಸೂಕ್ಷ್ಮಃ ಸ್ಯಾದ್ವಾಸನಾಮಯಃ**
**ಜ್ಞಾನಕರ್ಮೇನ್ದ್ರಿಯೈಃ ಸಾರ್ಧಂ ಧೀಪ್ರಾಣೌ ತಚ್ಛರೀರಗೌ ॥೧॥**
**ಅಜ್ಞಾನಂ ಕಾರಣಂ ಸಾಕ್ಷೀ ಬೋಧಸ್ತೇಷಾಂ ವಿಭಾಸಕಃ ।**
**ಬೋಧಾಭಾಸೋ ಬುದ್ಧಿಗತಃ ಕರ್ತಾ ಸ್ಯಾತ್ಪುಣ್ಯಪಾಪಯೋಃ ॥೨॥**

೧-೨. ಸ್ಥೂಲದೇಹವು ಮಾಂಸಮಯವಾದದ್ದು ; ಸೂಕ್ಷ್ಮದೇಹವು ವಾಸನಾಮಯವಾದದ್ದು[1] ; ಜ್ಞಾನೇಂದ್ರಿಯಗಳು,[2] ಕರ್ಮೇಂದ್ರಿಯಗಳು[3]- ಇವುಗಳೊಡಗೂಡಿದ ಅಂತಃಕರಣ, ಪ್ರಾಣ- ಇವೆರಡೂ ಆ ಸೂಕ್ಷ್ಮಶರೀರಕ್ಕೆ ಸೇರಿರುತ್ತವೆ. ಅಜ್ಞಾನವೇ ಕಾರಣದೇಹವು[4]. ಸಾಕ್ಷಿಚೈತನ್ಯವು ಈ ಮೂರು ದೇಹಗಳನ್ನೂ ಬೆಳಗುತ್ತದೆ. ಅಂತಃಕರಣದಲ್ಲಿರುವ **ಚಿದಾಭಾಸ**ನೇ[5] ಪುಣ್ಯಪಾಪಗಳನ್ನು ಮಾಡುವ ಜೀವನು.

---

1. ಎಚ್ಚರದಲ್ಲಿರುವ ನಮ್ಮ ಅಂತಃಕರಣದ ವಾಸನೆಯಿಂದ ಕನಸಿನಲ್ಲಿ ಒಂದು ಕಲ್ಪಿತಶರೀರವು ಏರ್ಪಡುವದೆಂದು ಭಾವಿಸುವ ವ್ಯಾವಹಾರಿಕದೃಷ್ಟಿಗೆ ಆ ಸೂಕ್ಷ್ಮಶರೀರವು ವಾಸನಾಮಯವೆಂದರೂ ಒಪ್ಪುತ್ತದೆ ; ಆದರೆ ಎಚ್ಚರದಲ್ಲಿರುವ ಅಂತಃಕರಣ, ಪ್ರಾಣ, ಇಂದ್ರಿಯಗಳು- ಇವುಗಳನ್ನು ವಾಸನಾಮಯವೆಂದು ಹೇಳುವದು ಎಂದಿಗೂ ಒಪ್ಪಾಗದು.

2. ಶ್ರೋತ್ರ, ತ್ವಕ್ಕು, ಚಕ್ಷುಸ್ಸು, ಜಿಹ್ವಾ, ಘ್ರಾಣ- ಇವು ಜ್ಞಾನೇಂದ್ರಿಯಗಳು.

3. ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ- ಇವು ಕರ್ಮೇಂದ್ರಿಯಗಳು.

4. ಅಜ್ಞಾನವು ಕಾರಣದೇಹವೆಂಬುದು ಪ್ರಸ್ಥಾನತ್ರಯಭಾಷ್ಯದಲ್ಲಿ ಅಷ್ಟು ಪ್ರಚುರವಾಗಿಲ್ಲ.

5. ಎಚ್ಚರಕನಸುಗಳಲ್ಲಿ ತೋರುವ 'ನಾನು' ಎಂಬ ರೂಪವನ್ನೇ ಚಿದಾಭಾಸನೆಂದು ಇಲ್ಲಿ ಕರೆದಿದೆ.

**ಸ ಏವ ಸಂಸರೇತ್ಕರ್ಮವಶಾಲ್ಲೋಕದ್ವಯೇ ಸದಾ ।**
**ಬೋಧಾಭಾಸಾಚ್ಛುದ್ಧಬೋಧಂ ವಿವಿಚ್ಯಾದತಿಯತ್ನತಃ ॥ ೩ ॥**

**ಜಾಗರಸ್ವಪ್ನಯೋರೇವ ಬೋಧಾಭಾಸವಿಡಮ್ಬನಾ ।**
**ಸುಪ್ತೌ ತು ತಲ್ಲಯೇ ಬೋಧಃ ಶುದ್ಧೋ ಜಾಡ್ಯಂ ಪ್ರಕಾಶಯೇತ್ ॥ ೪॥**

**ಜಾಗರೇಽಪಿ ಧಿಯಸ್ತೂಷ್ಣೀಂಭಾವಃ ಶುದ್ಧೇನ ಭಾಸ್ಯತೇ ।**
**ಧೀವ್ಯಾಪಾರಾಶ್ಚ ಚಿದ್ಭಾಸ್ಯಾಶ್ಚಿದಾಭಾಸೇನ ಸಂಯುತಾಃ ॥ ೫ ॥**

೩-೫. ಆ ಚಿದಾಭಾಸನೇ ತನ್ನ ಕರ್ಮಗಳ ವಶದಿಂದ ಇಹಲೋಕ ಪರಲೋಕಗಳಲ್ಲಿ ತೊಳಲುತ್ತಿರುತ್ತಾನೆ. ಚಿದಾಭಾಸನಿಂದ ಶುದ್ಧಚೈತನ್ಯ ರೂಪವನ್ನು ಬಹಳ ಯತ್ನದಿಂದ ವಿಂಗಡಿಸಿ ತಿಳಿದುಕೊಳ್ಳಬೇಕು. ಎಚ್ಚರ, ಕನಸು- ಈ ಎರಡರಲ್ಲಿಯೇ ಚಿದಾಭಾಸನ ವೇಷವಿರುತ್ತದೆ ; ಆದರೆ ತನಿನಿದ್ರೆಯಲ್ಲಿ ಅದು ಲಯವಾಗಿ ಶುದ್ಧಚೈತನ್ಯವು ಅಜ್ಞಾನವನ್ನು ಬೆಳಗುತ್ತಿರುತ್ತದೆ.[1] ಎಚ್ಚರದಲ್ಲಿಯೂ ಅಂತಃಕರಣದ ತೂಷ್ಣೀಂಭಾವವನ್ನು[2] ಶುದ್ಧ ಚೈತನ್ಯವೇ ಬೆಳಗುತ್ತದೆ ; ಚಿದಾಭಾಸನೊಡಗೂಡಿದ ಅಂತಃಕರಣವ್ಯಾಪಾರ ಗಳನ್ನೂ ಈ ಚೈತನ್ಯವೇ ಬೆಳಗುವದು.

**ವಹ್ನಿತಪ್ತಜಲಂ ತಾಪಯುಕ್ತಂ ದೇಹಸ್ಯ ತಾಪಕಮ್ ।**
**ಚಿದ್ಭಾಸ್ಯಾ ಧೀಸ್ತದಾಭಾಸಯುಕ್ತಾನ್ಯಂ ಭಾಸಯೇತ್ತಥಾ ॥ ೬ ॥**

1. 'ನಿದ್ರೆಯಲ್ಲಿ ನಾನೇನನ್ನೂ ಅರಿಯಲಿಲ್ಲ' ಎಂದು ಎಚ್ಚರದಲ್ಲಿ ಸ್ಮರಣೆಗೆ ಬರುವದರಿಂದ ನಿದ್ರೆಯಲ್ಲಿ ಅಜ್ಞಾನವನ್ನು ಆತ್ಮನು ಬೆಳಗುತ್ತಾನೆಂದು ಹೇಳುವದು ಶಂಕರ ಭಗವತ್ಪಾದರಿಂದೀಚಿನ ವೇದಾಂತಿಗಳಲ್ಲಿ ಬಹಳ ರೂಢಿಯಲ್ಲಿದೆ. ಪಂಚದಶೀ-ತತ್ತ್ವ ವಿವೇಕವನ್ನು ನೋಡಿ.

2. ತೂಷ್ಣೀಮವಸ್ಥೆಯನ್ನು ಆಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯದಲ್ಲಿ ಉದಾಹರಿಸಿರುವಂತೆ ತೋರುವದಿಲ್ಲ.

**ರೂಪಾದೌ ಗುಣದೋಷಾದಿವಿಕಲ್ಪಾ ಬುದ್ಧಿಗಾಃ ಕ್ರಿಯಾಃ ।**
**ತಾಃ ಕ್ರಿಯಾ ವಿಷಯೈಃ ಸಾರ್ಧಂ ಭಾಸಯನ್ತೀ ಚಿತಿರ್ಮತಾ ॥ ೭ ॥**

**ರೂಪಾಚ್ಚ ಗುಣದೋಷಾಭ್ಯಾಂ ವಿವಿಕ್ತಾ ಕೇವಲಾ ಚಿತಿಃ ।**
**ಸೈವಾನುವರ್ತತೇ ರೂಪರಸಾದೀನಾಂ ವಿಕಲ್ಪನೇ ॥ ೮ ॥**

**ಕ್ಷಣೇ ಕ್ಷಣೇಽನ್ಯಥಾಭೂತಾ ಧೀವಿಕಲ್ಪಾಶ್ಚಿತಿರ್ನ ತು ।**
**ಮುಕ್ತಾಸು ಸೂತ್ರವದ್ಬುದ್ಧಿವಿಕಲ್ಪೇಷು ಚಿತಿಸ್ತಥಾ ॥ ೯ ॥**

೭-೯. ಬೆಂಕಿಯಿಂದ ಕಾದ ನೀರು ಕಾವಿನಿಂದ ಕೂಡಿಕೊಂಡು ಮೈಯನ್ನು ಸುಡುತ್ತದೆ. ಅದರಂತೆ[1] ಚೈತನ್ಯದಿಂದ ಬೆಳಗುವ ಅಂತಃಕರಣವು ಚಿದಾಭಾಸನಿಂದೊಡಗೂಡಿ ಮಿಕ್ಕದ್ದೆಲ್ಲವನ್ನೂ ಬೆಳಗುತ್ತದೆ.[2] ರೂಪವೇ ಮುಂತಾದ ವಿಷಯಗಳಲ್ಲಿ ಉಂಟಾಗುವ ಗುಣ, ದೋಷ- ಮುಂತಾದ **ವಿಕಲ್ಪ**ಗಳು ಅಂತಃಕರಣದ ವಿಕಾರಗಳು ; ಆ ವಿಕಾರಗಳನ್ನೂ ವಿಷಯಗಳನ್ನೂ ಬೆಳಗುವದೇ ಚೈತನ್ಯವೆನಿಸುವದು. ರೂಪ ಮತ್ತು ಗುಣದೋಷಗಳು- ಇವುಗಳಿಗಿಂತ ಬೇರೆಯಾಗಿರುವದೇ ಬರಿಯ ಚೈತನ್ಯವು ; ರೂಪ, ರಸ- ಮುಂತಾದವುಗಳನ್ನು ವಿಕಲ್ಪಿಸುವಾಗಲೂ ಅದೇ ಕೇವಲಚೈತನ್ಯವೇ ಅನುಸರಿಸಿಕೊಂಡು ಬಂದಿರುತ್ತದೆ. ಅಂತಃಕರಣದ ವಿಕಲ್ಪಗಳು ಕ್ಷಣ

---

1. ಇದು ಸ್ಥೂಲದೃಷ್ಟಿಯಿಂದ ಹೇಳಿದ್ದು. ನೀರಿನಲ್ಲಿ ಬಿಸಿಯು ಸೇರಿಕೊಳ್ಳುವಂತೆ ಬುದ್ಧಿಯಲ್ಲಿ ಚೈತನ್ಯವು ನಿಜವಾಗಿಯೂ ಸೇರಿಕೊಳ್ಳುವ ಸಂಭವವಿಲ್ಲ.

2. ಬುದ್ಧಿಯೂ ಚಿದಾಭಾಸನೂ ಸೇರಿ ವಿಷಯವನ್ನು ಬೆಳಗುವ ಬಗೆಯನ್ನು ಈಗಿನ ವೇದಾಂತಿಗಳು ಹೇಗೆ ವರ್ಣಿಸುವರೆಂಬುದನ್ನು ತಿಳಿಯುವದಕ್ಕೆ ಪಂಚದಶೀ-ತೃಪ್ತಿದೀಪ (೯೧ನೆಯ ಶ್ಲೋಕ)ವನ್ನು ನೋಡಿ.

ಕ್ಷಣಕ್ಕೂ ಬೇರೆಯಾಗುತ್ತಿರುವವು, ಚೈತನ್ಯವು ಮಾತ್ರ ಹಾಗಲ್ಲ[1] ; ಮುತ್ತುಗಳಲ್ಲಿ ಪೋಣಿಸಿಕೊಂಡಿರುವ ದಾರವು ಒಂದೇ ಆಗಿರುವಂತೆ ಚೈತನ್ಯವು ಆ ಅಂತಃಕರಣ ವಿಕಲ್ಪಗಳಲ್ಲಿ ಒಂದೇ ಆಗಿರುತ್ತದೆ.

**ಮುಕ್ತಾಭಿರಾವೃತಂ ಸೂತ್ರಂ ಮುಕ್ತಯೋರ್ಮಧ್ಯ ಈಕ್ಷ್ಯತೇ ।**
**ತಥಾ ವೃತ್ತಿವಿಕಲ್ಪೈಶ್ಚಿತ್ಸ್ಪಷ್ಟಾ ಮಧ್ಯೇ ವಿಕಲ್ಪಯೋಃ ॥೧೦॥**

**ನಷ್ಟೇ ಪೂರ್ವವಿಕಲ್ಪೇ ತು ಯಾವದನ್ಯಸ್ಯ ನೋದಯಃ ।**
**ನಿರ್ವಿಕಲ್ಪಕಚೈತನ್ಯಂ ಸ್ಪಷ್ಟಂ ತಾವದ್ವಿಭಾಸತೇ ॥೧೧॥**

**ಏಕದ್ವಿತ್ರಿಕ್ಷಣೇಷ್ವೇವಂ ವಿಕಲ್ಪಸ್ಯ ನಿರೋಧನಮ್ ।**
**ಕ್ರಮೇಣಾಭ್ಯಸ್ಯತಾಂ ಯತ್ನಾದ್ಬ್ರಹ್ಮಾನುಭವಕಾಙ್ಕ್ಷಿಭಿಃ ॥೧೨॥**

೧೦-೧೨. ಮುತ್ತುಗಳಿಂದ ಮುಚ್ಚಿರುವ ದಾರವು ಎರಡು ಮುತ್ತುಗಳ ನಡುವೆ ಕಂಡುಬರುತ್ತದೆ ; ಅದರಂತೆ ವೃತ್ತಿಗಳ ವಿಕಲ್ಪಗಳಿಂದ ಮರೆಯಾಗಿದ್ದ[2] ಚೈತನ್ಯವು ಎರಡು ವಿಕಲ್ಪಗಳ ನಡುವೆ ಸ್ಪಷ್ಟವಾಗಿ ತೋರುತ್ತದೆ. ಹಿಂದಿನ ವಿಕಲ್ಪವು ಹೋಗಿ ಮತ್ತೊಂದು ವಿಕಲ್ಪವು ಇನ್ನೂ ಹುಟ್ಟಿಲ್ಲವೆನ್ನುವಾಗ ನಿರ್ವಿಕಲ್ಪಕವಾದ ಚೈತನ್ಯವು ಸ್ಪಷ್ಟವಾಗಿ ತೋರಿಕೊಳ್ಳು

1. ವಿಷಯಗಳೂ ವೃತ್ತಿಗಳೂ ಬೇರ್ಪಡುತ್ತಿದ್ದರೂ ಚೈತನ್ಯವು ಒಂದೇ ಆಗಿರುವದೆಂಬುದನ್ನು ಇಲ್ಲಿ ತೋರಿಸಿರುವ ಕ್ರಮವು ಪಂಚದಶಿಯ ತತ್ತ್ವವಿವೇಕದ ಕ್ರಮದಂತೆಯೇ ಇದೆ.

2. ವೃತ್ತಿಗಳಿಂದ ಚೈತನ್ಯವು ಮರೆಯಾಗಿರುವದೆಂಬುದು ಸ್ಥೂಲದೃಷ್ಟಿ, ಎಂದರೆ ಮನಸ್ಸಿನ ವಿಕಲ್ಪಗಳ ಕಡೆಗೇ ಲಕ್ಷ್ಯವನ್ನು ಕೊಟ್ಟವರಿಗೆ ಚೈತನ್ಯವು ಸ್ವಯಂಪ್ರಕಾಶವೆಂಬುದು ಮನಗಾಣುವದಿಲ್ಲವೆಂಬ ಅಭಿಪ್ರಾಯದಿಂದ ಹೇಳಿದ್ದು. ನಿಜವಾಗಿ ನೋಡಿದರೆ ವಿಕಲ್ಪವು ಚೈತನ್ಯವನ್ನು- ದಾರವನ್ನು ಮುತ್ತುಗಳು ಮುಚ್ಚುವಂತೆ- ಮುಚ್ಚುವದಿಲ್ಲ ; ಚೈತನ್ಯವು ವಿಕಲ್ಪಕ್ಕೆ ವಿಷಯವಲ್ಲ, ವಿಕಲ್ಪವೇ ಚೈತನ್ಯಕ್ಕೆ ವಿಷಯವಾಗಿದೆ.

ತ್ತದೆ. ಬ್ರಹ್ಮಾನುಭವವನ್ನಪೇಕ್ಷಿಸುವವರು ಒಂದನೆಯ, ಎರಡನೆಯ, ಮೂರನೆಯ ಕ್ಷಣಗಳಲ್ಲಿ ಹೀಗೆ ವಿಕಲ್ಪವನ್ನು ಅಳಿಸಿಹಾಕುವ ಬಗೆಯನ್ನು ಪ್ರಯತ್ನಪೂರ್ವಕವಾಗಿ[1] ಕ್ರಮವಾಗಿ ಅಭ್ಯಾಸಮಾಡಬೇಕು.

**ಸವಿಕಲ್ಪಕಜೀವೋऽಹಂ[2] ಬ್ರಹ್ಮ ತನ್ನಿರ್ವಿಕಲ್ಪಕಮ್ ।**
**ಅಹಂ ಬ್ರಹ್ಮೇತಿ ವಾಕ್ಯೇನ ಸೋऽಯಮರ್ಥೋऽಭಿಧೀಯತೇ ॥೧೩॥**
**ಸವಿಕಲ್ಪಕಚಿದ್ಯೋऽಹಂ ಬ್ರಹ್ಮೈಕಂ ನಿರ್ವಿಕಲ್ಪಕಮ್ ।**
**ಸ್ವತಃಸಿದ್ಧಂ ವಿಕಲ್ಪಾಸ್ತೇ ನಿರೋದ್ಧವ್ಯಾಃ ಪ್ರಯತ್ನತಃ ॥೧೪॥**

೧೩-೧೪. ವಿಕಲ್ಪದಿಂದೊಡಗೂಡಿದ ಜೀವನಾದ ನಾನು ಪರಮಾರ್ಥವಾಗಿ ಆ ನಿರ್ವಿಕಲ್ಪಕವಾದ ಬ್ರಹ್ಮವೇ. 'ಅಹಂ ಬ್ರಹ್ಮ' (ನಾನು ಬ್ರಹ್ಮವು) ಎಂಬ ವಾಕ್ಯದಲ್ಲಿ[3] ಈ ಅರ್ಥವನ್ನು ಹೇಳಿರುತ್ತದೆ. ವಿಕಲ್ಪಗಳಿಂದೊಡಗೂಡಿದ ಚೈತನ್ಯವಾಗಿರುವ ನಾನು ಸ್ವತಃಸಿದ್ಧವಾಗಿರುವ

1. ಚೆನ್ನಾಗಿ ನೋಡಿದರೆ ಒಂದು ವಿಕಲ್ಪವು ಹೋದ ಕೂಡಲೆ ಮತ್ತೊಂದು ವಿಕಲ್ಪವು ಕಾಣಿಸಿಕೊಳ್ಳುವದೇ ಹೊರತು ಎರಡು ವಿಕಲ್ಪಗಳ ನಡುವೆ ವಿಕಲ್ಪವಿಲ್ಲದ್ದೆಂಬ ಅಂತರಾಳವು ಕಾಣಿಸುವದಿಲ್ಲ; ವಿಕಲ್ಪರೂಪವಾದ ವೃತ್ತಿಗಳಿಲ್ಲದಿದ್ದರೆ ತೂಷ್ಣೀಂಭಾವವೆಂದು ಈಗಿನವರು ಕರೆಯುವ ವೃತ್ತಿಯಾದರೂ ಇರುತ್ತದೆ. ಆದರೂ ಒಂದು ವೃತ್ತಿಯು ಹೋದ ಮೇಲೆಯೇ ಇನ್ನೊಂದು ವೃತ್ತಿಯು ಹುಟ್ಟುವದರಿಂದ ಇವೆರಡರ ನಡುವೆಯೊಂದಿದೆ ಎಂದು ತರ್ಕದಿಂದ ಸಿದ್ಧಮಾಡಿಕೊಳ್ಳಬಹುದು, ಇದನ್ನೇ ಮತ್ತೆ ಮತ್ತೆ ಮನಸ್ಸಿಗೆ ತಂದುಕೊಳ್ಳಲೂ ಬಹುದು. ಈ ಚಿಂತನೆಯನ್ನು ಬ್ರಹ್ಮಾನುಭವಕ್ಕೆ ಸಾಧನವೆಂದು ಏಕೆ ಹೇಳಿರುವರೋ ತಿಳಿಯದು.

2. 'ಜೀವೋऽಯಮ್' ಪಾ॥

3. 'ಹಾವು ನಿಜವಾಗಿ ಹಗ್ಗವೇ' ಎಂಬಂತೆ 'ನಾನು ಬ್ರಹ್ಮವು' ಎಂಬ ವಾಕ್ಯಕ್ಕೂ ಅರ್ಥವನ್ನು ಮಾಡಬೇಕೆಂಬ ಅಭಿಪ್ರಾಯವು ಬರುವಂತೆ ಶ್ಲೋಕವನ್ನು ಕನ್ನಡಿಸಿದೆ. ಆದರೆ ಈ ಅರ್ಥವು ಮೂಲದಲ್ಲಿ ಅಷ್ಟು ಸ್ಪಷ್ಟವಾಗಿ ತೋರುವದಿಲ್ಲ.

ಅದ್ವಿತೀಯವಾದ ನಿರ್ವಿಕಲ್ಪಕಬ್ರಹ್ಮವೇ ; ಆದರೆ ಆ ವಿಕಲ್ಪಗಳನ್ನು ಮಾತ್ರ ಪ್ರಯತ್ನದಿಂದ ನಿರೋಧಮಾಡಿಕೊಳ್ಳಬೇಕು.[1]

**ಶಕ್ಯಃ ಸರ್ವನಿರೋಧೇನ ಸಮಾಧಿರ್ಯೋಗಿನಾಂ ಪ್ರಿಯಃ ।**
**ತದಶಕ್ತೌ ಕ್ಷಣಂ ರುದ್ಧ್ವಾ ಶ್ರದ್ಧಾಲೋರ್ಬ್ರಹ್ಮತಾತ್ಮನಃ ॥೧೫॥**

**ಶ್ರದ್ಧಾಲುರ್ಬ್ರಹ್ಮತಾಂ ಸ್ವಸ್ಯ ಚಿನ್ತಯೇದ್ಬುದ್ಧಿವೃತ್ತಿಭಿಃ ।**
**ವಾಕ್ಯವೃತ್ತ್ಯಾ ಯಥಾಶಕ್ತಿ ಜ್ಞಾತ್ವಾದ್ಧಾಭ್ಯಸ್ಯತಾಂ ಸದಾ ॥೧೬॥**

**ತಚ್ಚಿನ್ತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್ ।**
**ಏತದೇಕಪರತ್ವಂ ಚ ಬ್ರಹ್ಮಾಭ್ಯಾಸಂ ವಿದುರ್ಬುಧಾಃ ॥೧೭॥**

೧೫-೧೭. ಸರ್ವಚಿತ್ತವೃತ್ತಿಗಳನ್ನೂ ನಿರೋಧಗೊಳಿಸುವದರಿಂದ ಯೋಗಿಗಳಿಗೆ ಪ್ರಿಯವಾದ ಸಮಾಧಿಯನ್ನು ಸಾಧಿಸಬಹುದು. ಅಷ್ಟು ಕೈಯಲ್ಲಾಗದಿದ್ದರೆ ಒಂದು ಕ್ಷಣದಮಟ್ಟಿಗೆ ಚಿತ್ತನಿರೋಧವನ್ನು ಮಾಡಿಕೊಂಡು[2] ಶ್ರದ್ಧೆಯಿಡುವವನಿಗೆ ತಾನು ಬ್ರಹ್ಮವೆಂಬುದು ಮನವರಿಕೆಯಾಗುವದು. ಶ್ರದ್ಧಾಲುವಾದವನು ತಾನು ಬ್ರಹ್ಮವೆಂಬುದನ್ನು ಬುದ್ಧಿವೃತ್ತಿಗಳ ಮೂಲಕ ಚಿಂತಿಸುತ್ತಿರಬೇಕು ; ವಾಕ್ಯವೃತ್ತಿಯಿಂದ[3] ತನ್ನ ಕೈಯಲ್ಲಾದ

---

1. 'ಜೀವೋಽಯಮ್' ಎಂಬ ಪಾಠವು ಪ್ರಕೃತಕ್ಕೆ ಹೊಂದುವದಿಲ್ಲವಾದ್ದರಿಂದ ಅದನ್ನು ಕೈಬಿಟ್ಟಿದೆ. ವಿಕಲ್ಪಸಹಿತನಾದ ಜೀವನು ವಿಕಲ್ಪರಹಿತವಾದ ಬ್ರಹ್ಮವಾಗುವದಕ್ಕೆ ಚಿತ್ತವೃತ್ತಿಗಳನ್ನು ನಿರೋಧಮಾಡಬೇಕೆಂದು ಭಾವ. ವಿಕಲ್ಪಗಳ ಮಿಥ್ಯಾತ್ವವನ್ನು ಅರಿತುಕೊಳ್ಳಬಲ್ಲ ಉತ್ತಮಾಧಿಕಾರಿಗೆ ಈ ಸಾಧನವಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಮಾಂ.ಕಾ.ಭಾ. ೩-೪೦, ಬೃ.ಭಾ. ೧-೪-೭ ಇವುಗಳನ್ನು ನೋಡಿ.

2. ನಿಜವಾಗಿ ಶ್ರದ್ಧಾಲುವಾದವನಿಗೆ ವೇದವಾಕ್ಯವೇ ಸಾಕು ; ಅವನು ಉಪಾಸನೆಯಿಂದ ಕ್ರಮಮುಕ್ತಿಯನ್ನು ಪಡೆಯಬಹುದು. ಇಲ್ಲಿ ಯೋಗಾಭ್ಯಾಸದಿಂದ ನಿರೋಧವನ್ನು ಹೇಳಿರುವದು ಮಧ್ಯಮಾಧಿಕಾರಿಗೆ ಎಂದೂ ಅರ್ಥವನ್ನು ಮಾಡಬಹುದು. ಮಾಂ.ಕಾ.ಭಾ. ೩-೪೦ನ್ನು ನೋಡಿ.

3. ಈ ಗ್ರಂಥದ ಹೆಸರಿಗೆ ಈ ಮಾತು ಕಾರಣವಾಗಿರಬಹುದೆ? ಪೀಠಿಕೆಯನ್ನು ನೋಡಿ.

ಮಟ್ಟಿಗೂ ಸ್ಪಷ್ಟವಾಗಿ ತಿಳಿದುಕೊಂಡು ಯಾವಾಗಲೂ ಅಭ್ಯಾಸಮಾಡುತ್ತಿರಬೇಕು. "ಅದನ್ನೇ ಚಿಂತಿಸುತ್ತಿರುವದು, ಅದನ್ನೇ ಹೇಳುತ್ತಿರುವದು, ಒಬ್ಬರಿಗೊಬ್ಬರು ಅದನ್ನು ತಿಳಿಸುತ್ತಿರುವದು, ಅದೊಂದರಲ್ಲಿಯೇ ತಾತ್ಪರ್ಯವುಳ್ಳವರಾಗಿರುವದು- ಇದನ್ನೇ ಬ್ರಹ್ಮಾಭ್ಯಾಸವೆಂದು ತಿಳಿದವರು ಅಭಿಪ್ರಾಯಪಡುತ್ತಾರೆ."[1]

**ದೇಹಾತ್ಮಧೀವದ್ಬ್ರಹ್ಮಾತ್ಮಧೀದಾರ್ಢ್ಯೇ ಕೃತಕೃತ್ಯತಾ ।**
**ಯದಾ ತದಾಯಂ ಮ್ರಿಯತಾಂ ಮುಕ್ತೋಽಸೌ ನಾತ್ರ ಸಂಶಯಃ ॥೧೮॥**

೧೮. ದೇಹವೇ ನಾನೆಂಬ ಬುದ್ಧಿಯು ಹೇಗೆ ದೃಢವಾಗಿರುತ್ತದೆಯೋ ಹಾಗೆ ಬ್ರಹ್ಮವೇ ನಾನೆಂಬ ಬುದ್ಧಿಯು ದೃಢವಾದರೆ ಕೃತಕೃತ್ಯನಾದನು.[2] ಅವನು ಯಾವಾಗ ಮೃತನಾದರೂ[3] ಮುಕ್ತನೇ, ಸಂಶಯವಿಲ್ಲ.

**ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ**
**ಶ್ರೀಮಚ್ಛಂಕರಾಚಾರ್ಯಕೃತಾ**
**ಲಘುವಾಕ್ಯವೃತ್ತಿಃ ಸಂಪೂರ್ಣಾ.**

1. ಇದು ವಾಸಿಷ್ಠರಾಮಾಯಣದ ಉತ್ಪತ್ತಿಪ್ರಕರಣದಲ್ಲಿರುವ (೩-೨೪) ಶ್ಲೋಕದರೂಪಾಂತರವು. ಅಲ್ಲಿ 'ಬ್ರಹ್ಮಾಭ್ಯಾಸಂ' ಎಂಬುದಕ್ಕೆ ಬದಲು 'ತದಭ್ಯಾಸಂ' ಎಂದಿದೆ.

2. ಉಪದೇಶಸಾಹಸ್ರಿಯ ಪದ್ಯಭಾಗದಲ್ಲಿರುವ ಶ್ಲೋಕದ (೪-೫೭) ಅಭಿಪ್ರಾಯವಿದು.

3. ಜ್ಞಾನವಾದ ಕೂಡಲೆ ದೇಹವನ್ನು ಬಿಟ್ಟರೂ, ಪ್ರಾರಬ್ಧವಶದಿಂದ ಕೆಲವು ಕಾಲ ಜೀವನ್ಮುಕ್ತನಾಗಿದ್ದು ಆಮೇಲೆ ಪ್ರಾಣವನ್ನು ಬಿಟ್ಟರೂ, ಮುಕ್ತಿಯು ಸಿದ್ಧವೆಂದು ಭಾವ. ಈ ಅಭಿಪ್ರಾಯವು ಸದ್ಯೋಮುಕ್ತಿ-ಜೀವನ್ಮುಕ್ತಿಭೇದವಾದಿಗಳಿಗೂ ಒಪ್ಪಾಗಿರುವದು. ಪೀಠಿಕೆಯನ್ನು ನೋಡಿ. ಮರಣಕ್ಕೆ ಉತ್ತರಾಯಣ, ಹಗಲುಹೊತ್ತು- ಮುಂತಾದ ಪ್ರಶಸ್ತಕಾಲನಿರೀಕ್ಷಣೆಯೇನೂ ಜ್ಞಾನಿಗೆ ಅವಶ್ಯವಿಲ್ಲವೆಂಬ ಅಭಿಪ್ರಾಯವನ್ನೂ ಈ ಶ್ಲೋಕಕ್ಕೆ ಹೇಳಬಹುದು. ಬ್ರ.ಸೂ.ಭಾ. (೪-೨-೧೯, ೨೦)ವನ್ನು ನೋಡಿ.

# ೧. ಶ್ಲೋಕಾನುಕ್ರಮಣಿಕೆ

## ವಾಕ್ಯವೃತ್ತಿ

ಶ್ಲೋಕಪಾದದ ಮೊದಲು ಕೊಟ್ಟಿರುವದು ಆಯಾ ಶ್ಲೋಕದ ಸಂಖ್ಯೆ; ಬಲಗಡೆಯಲ್ಲಿರುವದು ಪಂಚದಶಿಯ ತೃಪ್ತಿದೀಪದ ಶ್ಲೋಕದ ಸಂಖ್ಯೆ ; ಕೂ. ಎಂಬುದು ಕೂಟಸ್ಥದೀಪದ ಶ್ಲೋಕದ ಸಂಖ್ಯೆ ; ವಾ. ಉ. ಎಂದಿರುವದು ವಾಸಿಷ್ಠರಾಮಾಯಣದ ಉತ್ಪತ್ತಿಪ್ರಕರಣದ ಶ್ಲೋಕದ ಸಂಖ್ಯೆ.


೨೧ ಅಗಮನ್ಮೇ ಮನೋಽನ್ಯತ್ರ
೨೦ ಅಜಡಾತ್ಮವದಾಭಾನ್ತಿ
೮ ಅತ್ರ ಬ್ರೂಮಃ ಸಮಾಧಾನಂ
೧೪ ಅನಾತ್ಮಾ ಯದಿ ಪಿಣ್ಡೋಽಯಂ
೧೯ ಅನಾಪನ್ನವಿಕಾರಃ ಸನ್
೪ ಅನಾಯಾಸೇನ ಯೇನಾಸ್ಮಾತ್
೧೧ ಅನ್ತಃಕರಣತದ್ವೃತ್ತಿ-ಕೂ. ೨೫
೪೯ ಅಹಂ ಬ್ರಹ್ಮೇತಿ ವಾಕ್ಯಾರ್ಥ - ೯೮
೪೪ ಆಲಮ್ಬನತಯಾ ಭಾತಿ
೪೦ ಇತ್ಥಮನ್ಯೋನ್ಯತಾದಾತ್ಮ್ಯ - ೭೭
೧೬ ಏವಮಿನ್ದ್ರಿಯದೃಙ್ನಾಹಂ
೩೬ ಕರ್ಮಣಾಂ ಫಲದಾತೃತ್ವಂ
೭ ಕೋ ಜೀವಃ ಕಃ ಪರಶ್ಚಾತ್ಮಾ
೧೫ ಘಟದ್ರಷ್ಟಾ ಘಟಾದ್ಭಿನ್ನಃ
೨೩ ಘಟಾವಭಾಸಕೋ ದೀಪೋ
೩೫ ಜೀವಾತ್ಮನಾ ಪ್ರವೇಶಶ್ಚ
೪೮ ತತ್ತ್ವಮಸ್ಯಾದಿವಾಕ್ಯೇಷು ೭೪
೬ ತತ್ತ್ವಮಸ್ಯಾದಿವಾಕ್ಯೋತ್ಥಂ
೪೨ ತತ್ತ್ವಮಸ್ಯಾದಿವಾಕ್ಯಂ ಚ
೩೭ ತತ್ತ್ವಂ ಪದಾರ್ಥೌ ನಿರ್ಣೀತೌ
೪೧ ತದರ್ಥಸ್ಯ ಚ ಪಾರೋಕ್ಷ್ಯಂ ೭೮
೨೮ ತ್ವಮರ್ಥಮೇವಂ ನಿಶ್ಚಿತ್ಯ ೮೭
೩ ತಾಪತ್ರಯಾರ್ಕಸನ್ತಪ್ತಃ
೨೭ ದೇಹೇನ್ದ್ರಿಯಮನಃಪ್ರಾಣಾ-
೧೮ ದೇಹೇನ್ದ್ರಿಯಾದಯೋ ಭಾವಾ
೫೩ ನಿರಸ್ತಾತಿಶಯಾನನ್ದಂ
೩೦ ನಿರಸ್ತಾತಿಶಯಾನನ್ದಃ
೨೯ ನಿರಸ್ತಾಶೇಷಸಂಸಾರ-
೯ ಪದಾರ್ಥಮೇವ ಜಾನಾಮಿ
೨೫ ಪರಪ್ರೇಮಾಸ್ಪದತಯಾ
೨೪ ಪುತ್ರವಿತ್ತಾದಯೋ ಭಾವಾಃ
೪೬ ಪ್ರತ್ಯಕ್ಪರೋಕ್ಷತೈಕಸ್ಯ. ೬೩
೩೦ ಪ್ರತ್ಯಗ್ಬೋಧೋ ಯ ಆಭಾತಿ ೭೬
೫೨ ಪ್ರಾರಬ್ಧಕರ್ಮವೇಗೇನ
೪೭ ಮನಾನ್ತರವಿರೋಧೇ ತು
೪೫ ಮಾಯೋಪಾಧಿರ್ಜಗದ್ಯೋನಿಃ ೭೨

## ಶ್ಲೋಕಾನುಕ್ರಮಣಿಕೆ


೨೬ ಯಃ ಸಾಕ್ಷಿಲಕ್ಷಣೋ ಬೋಧಃ

೩೨ ಯಜ್ಜ್ಞಾನಾತ್ಸರ್ವವಿಜ್ಞಾನಂ

೩೩ ಯದಾನನ್ತ್ಯಂ ಪ್ರತಿಜ್ಞಾಯ

೨ ಯಸ್ಯ ಪ್ರಸಾದಾದಹಮೇವ

೧೩ ರೂಪಾದಿಮಾನ್ಯತಃ ಪಿಣ್ಡಃ

೫೦ ಶ್ರುತ್ಯಾಚಾರ್ಯಪ್ರಸಾದೇನ

೩೮ ಸಂಸರ್ಗೋ ವಾ ವಿಶಿಷ್ಟೋ ವಾ ೭೫

೧೭ ಸಜ್ಞಾತೋಽಪಿ ತಥಾ ನಾಹಂ

೧೦ ಸತ್ಯಮಾಹ ಭವಾನತ್ರ

೧೨ ಸತ್ಯಾನಂದಸ್ವರೂಪಂ ಧೀ-

೧ ಸರ್ಗಸ್ಥಿತಿಪ್ರಲಯಹೇತು-

೩೧ ಸರ್ವಜ್ಞತ್ವಂ ಪರೇಶತ್ವಂ

೫ ಸಾಧ್ವೀ ತೇ ವಚನವ್ಯಕ್ತಿಃ

೨೨ ಸ್ವಪ್ನಜಾಗರಿತೇ ಸುಪ್ತಿಂ

೩೪ ವಿಜಿಜ್ಞಾಸ್ಯತಯಾ ಯತ್ರ

೫೧ ವಿಶೀರ್ಣಕಾರ್ಯಕರಣೋ

೪೩ ಹಿತ್ವಾ ದ್ವೌ ಶಬಲೌ ವಾಚ್ಯೌ


## ಲಘುವಾಕ್ಯವೃತ್ತಿ


೨ ಅಜ್ಞಾನಂ ಕಾರಣಂ ಸಾಕ್ಷೀ

೧೨ ಏಕದ್ವಿತ್ರಿಕ್ಷಣೇಷ್ವೇವಂ

೯ ಕ್ಷಣೇ ಕ್ಷಣೇಽನ್ಯಥಾ ಭೂತಾ

೪ ಜಾಗರಸ್ವಪ್ನಯೋರೇವ

೫ ಜಾಗರೇಽಪಿ ಧಿಯಸ್ತೂಷ್ಣೀಂ

೧೭ ತಚ್ಚಿನ್ತನಂ ತತ್ಕಥನಂ ವಾ. ಉ. ೨೨-೨೪

೧೮ ದೇಹಾತ್ಮಧೀವದ್ಬ್ರಹ್ಮಾತ್ಮ್ಯ-

೧೧ ನಷ್ಟೇ ಪೂರ್ವವಿಕಲ್ಪೇ ತು

೧೦ ಮುಕ್ತಾಭಿರಾವೃತಂ ಸೂತ್ರಂ

೮ ರೂಪಾಚ್ಚ ಗುಣದೋಷಾಭ್ಯಾಂ-

೭ ರೂಪಾದೌ ಗುಣದೋಷಾದಿ

೬ ವಹ್ನಿತಪ್ತಜಲಂ ತಾಪ-

೧೫ ಶಕ್ಯಃ ಸರ್ವನಿರೋಧೇನ

೧೭ ಶ್ರದ್ಧಾಲುರ್ಬ್ರಹ್ಮತಾಂ ಸ್ವಸ್ಯ

೩ ಸ ಏವ ಸಂಸರೇತ್ಕರ್ಮ

೧೪ ಸವಿಕಲ್ಪಕಚಿದ್ಯೋಽಹಂ

೧೩ ಸವಿಕಲ್ಪಕಜೀವೋಽಹಂ

೧ ಸ್ಥೂಲೋ ಮಾಂಸಮಯೋ ದೇಹಃ


--------

# ೨. ಪ್ರಮಾಣವಾಕ್ಯಗಳ ಅನುಕ್ರಮಣಿಕೆ

ವಾಕ್ಯವೃತ್ತಿಯಲ್ಲಿಯೂ ಲಘುವಾಕ್ಯವೃತ್ತಿಯಲ್ಲಿಯೂ ಸೂಚಿತವಾಗಿರುವ ಪ್ರಮಾಣವಚನಗಳ ಸ್ಥಾನವನ್ನು ಇಲ್ಲಿ ವಿವರಿಸಿದೆ.

**ಕಠೋಪನಿಷತ್ತು :**

೧. ವಿಜ್ಞಾನಸಾರಥಿರ್ಯಸ್ತು ಮನಃಪ್ರಗ್ರಹವಾನ್ನರಃ । ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥ (೧-೨-೯)

**ಕೌಷೀತಕಿಬ್ರಾಹ್ಮಣೋಪನಿಷತ್ತು :**

೨. ಏಷ ಹ್ಯೇವ ಸಾಧು ಕರ್ಮ ಕಾರಯತಿ ಯಮೇಭ್ಯೋ ಲೋಕೇಭ್ಯ ಉನ್ನಿನೀಷತೇ । ಏಷ ಉ ಏವಾಸಾಧು ಕರ್ಮ ಕಾರಯತಿ ತಂ ಯಮಧೋ ನಿನೀಷತೇ ॥ (೩-೯)

**ಛಾಂದೋಗ್ಯೋಪನಿಷತ್ತು :**

೩. ಉತ ತಮಾದೇಶಮಪ್ರಾಕ್ಷ್ಯಃ । ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮಿತಿ ॥ (೬-೧-೩)

೪. ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ॥ ಯಥಾ ಸೋಮ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಲೋಹಮಿತ್ಯೇವ ಸತ್ಯಮ್ ॥ ಯಥಾ ಸೋಮ್ಯೈಕೇನ ನಖನಿಕೃನ್ತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಕೃಷ್ಣಾಯಸಮಿತ್ಯೇವ ಸತ್ಯಮೇವಂ ಸೋಮ್ಯ ಸ ಆದೇಶೋ ಭವತೀತಿ ॥

(೬-೧-೪, ೫, ೬)

೫. ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ (೬-೬-೭ ಇತ್ಯಾದಿ)

೬. ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ ॥ (೮-೭-೧)

೭. ಸೇಯಂ ದೇವತೈಕ್ಷತ ಹನ್ತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾಽಽತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣೀತಿ ॥ (೬-೩-೨)

**ತೈತ್ತಿರೀಯೋಪನಿಷತ್ತು :**

೮. ಆನನ್ದೋ ಬ್ರಹ್ಮೇತಿ ವ್ಯಜಾನಾತ್ (೩-೬)

೯. ತಸ್ಮಾದ್ವಾ ಏತಸ್ಮಾತ್ ಆತ್ಮನ ಆಕಾಶಃ ಸಮ್ಭೂತಃ (೨-೧)

೧೦. ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ । ಯತ್ಪ್ರಯನ್ತ್ಯಭಿಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ॥ (೩-೧)

**ಬೃಹದಾರಣ್ಯಕೋಪನಿಷತ್ತು :**

೧೧. ಅಥಾತ ಆದೇಶೋ ನೇತಿ ನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರಮಸ್ತಿ । (೨-೩-೯)

೧೨. ಉಭೇ ಉ ಹ್ಯೇವೈಷ ತರತಿ । (೪-೪-೨೨)

೧೩. ಏಷ ತ ಆತ್ಮಾಽನ್ತರ್ಯಾಮ್ಯಮೃತಃ (೩-೭-೩ರಿಂದ ೨೩)

೧೪. ತದೇತತ್ಪ್ರೇಯಃ ಪುತ್ರಾತ್ಪ್ರೇಯೋ ವಿತ್ತಾತ್ಪ್ರೇಯೋಽನ್ಯಸ್ಮಾತ್ಸರ್ವ-ಸ್ಮಾದನ್ತರತರಂ ಯದಯಮಾತ್ಮಾ ॥ (೪-೪-೮)

೧೫. ಸ ವಾ ಏಷ ಮಹಾನಜ ಆತ್ಮಾನ್ನಾದೋ ವಸುದಾನಃ ॥ (೪-೪-೨೪)

೧೬. ಸ ಹೋವಾಚೈತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿ-ವದನ್ತ್ಯಸ್ಥೂಲಮನಣ್ವಹ್ರಸ್ವಮದೀರ್ಘಮಲೋಹಿತಮಸ್ನೇಹಮ ಚ್ಛಾಯಮತಮೋಽವಾಯ್ವನಾಕಾಶಮಸಙ್ಗಮರಸಮಗನ್ಧಮಚ ಕ್ಷುಷ್ಕಮಶ್ರೋತ್ರಮವಾಗಮನೋಽತೇಜಸ್ಕಮಪ್ರಾಣಮಮುಖ

ಮಮಾತ್ರಮನನ್ತರಮಬಾಹ್ಯಂ ನ ತದಶ್ನಾತಿ ಕಿಂಚನ ನ ತದಶ್ನಾತಿ ಕಶ್ಚನಃ ॥ (೩-೮-೮)

೧೭. ವಿಜ್ಞಾನಮಾನನ್ದಂ ಬ್ರಹ್ಮ ರಾತೇರ್ದಾತುಃ ಪರಾಯಣಮ್ ।

(೩-೯-೨೮)

**ಮುಣ್ಡಕೋಪನಿಷತ್ತು :**

೧೮. ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಮ್ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಶ್ಯನ್ತಿ ಧೀರಾಃ । (೧-೧-೬)

೧೯. ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ । ತಸ್ಮಾದೇತದ್ಬ್ರಹ್ಮ ನಾಮರೂಪಮನ್ನಂ ಚ ಜಾಯತೇ ॥ (೧-೧-೯)

**ಶ್ವೇತಾಶ್ವತರೋಪನಿಷತ್ತು :**

೨೦. ಕ್ಷರಂ ತ್ವವಿದ್ಯಾ ಹ್ಯಮೃತಂ ತು ವಿದ್ಯಾ ವಿದ್ಯಾವಿದ್ಯೇ ಈಶತೇ ಯಸ್ತು ಸೋಽನ್ಯಃ ॥ (೫-೧)

೨೧. ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್ । ಪತಿಂ ಪತೀನಾಂ ಪರಮಂ ಪುರಸ್ತಾದ್ವಿದಾಮ ದೇವಂ ಭುವನೇಶಮೀಡ್ಯಮ್ ॥ (೬-೭)

೨೨. ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥ (೬-೮)

**ವಾಸಿಷ್ಠರಾಮಾಯಣ :**

೨೩. ತಚ್ಚಿನ್ತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್ ।
ಏತದೇಕಪರತ್ವಂ ಚ ತದಭ್ಯಾಸಂ ವಿದುರ್ಬುಧಾಃ ॥

(ಉ. ೨೨-೨೪)

# ೩. ವಿದೇಹಮುಕ್ತಿಯ ವಿಚಾರ

## ಸಂಕ್ಷೇಪಶಾರೀರಕ - ನಾಲ್ಕನೆಯ ಅಧ್ಯಾಯ

ಸೂಚನೆ : ಕೆಳಗೆ ಕೊಟ್ಟಿರುವ ಭಾಗದಲ್ಲಿ ಪದ್ಯದ ಅವತರಣಿಕೆಯು ವ್ಯಾಖ್ಯಾನಕಾರರಾದ ಮಧುಸೂದನಸರಸ್ವತಿಗಳದ್ದು. ಪದ್ಯವನ್ನು ಅಕ್ಷರಕ್ಕನುಗುಣವಾಗಿ ಕನ್ನಡಿಸಿದೆ.

''ಬರಿಯ ತತ್ತ್ವಜ್ಞಾನದಿಂದಲೇ ಬಂಧವು ಹೋಗಲಾರದು ; ಏಕೆಂದರೆ ತತ್ತ್ವಜ್ಞಾನಿಗಳಿಗೂ ಶರೀರವೇ ಮುಂತಾದವುಗಳ ಬಂಧವಿರುವದು ಕಂಡುಬರುತ್ತದೆ- ಎಂಬ ಶಂಕೆಗೆ ಪರಿಹಾರವಾಗಿ 'ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ' (ಜ್ಞಾನಿಯು ನಾಮರೂಪಗಳಿಂದ ಬಿಡುಗಡೆ ಹೊಂದುತ್ತಾನೆ), 'ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ' (ಹೀಗೆಯೇ ಈ ಜ್ಞಾನಿಗೆ ಈ ಹದಿನಾರು ಕಲೆಗಳೂ ಪುರುಷನನ್ನೇ ಕುರಿತು ಹೋಗುವವಾದ್ದರಿಂದ ಪುರುಷನನ್ನು ಸೇರಿದಮೇಲೆ ಇಲ್ಲವಾಗುತ್ತವೆ) -ಮುಂತಾದ ಶಾಸ್ತ್ರಪ್ರಮಾಣದ ಬಲದಿಂದಲೂ ಲೋಕದಲ್ಲಿ ಜ್ಞಾನವು ಅಜ್ಞಾನವನ್ನು ತೊಲಗಿಸುವದಕ್ಕೆ ಮತ್ತೊಂದನ್ನು ಬಯಸದ ಸಾಧನವಾಗಿರುವದರಿಂದಲೂ ತತ್ತ್ವಸಾಕ್ಷಾತ್ಕಾರವಾದವನಿಗೆ ಕೂಡಲೆ ವಿದೇಹಕೈವಲ್ಯವಾಗುತ್ತದೆ. ಆದರೆ ಯಾವನಿಗೆ ದೇಹವೇ ಮುಂತಾದ ಬಂಧವು ಕಂಡುಬರುತ್ತದೆಯೋ ಅವನಿಗೆ ತತ್ತ್ವಸಾಕ್ಷಾತ್ಕಾರವಾಗಿರುವದಿಲ್ಲವೆಂದೇ ನಿಶ್ಚಯಿಸಬೇಕು- ಎಂಬ ಅಭಿಪ್ರಾಯದಿಂದ ಸದ್ಯೋಮುಕ್ತಿಮತವನ್ನು ತಿಳಿಸುತ್ತಾರೆ :

ಸಮ್ಯಗ್ಜ್ಞಾನವಿಭಾವಸುಃ ಸಕಲಮೇವಾಜ್ಞಾನತತ್ಸಮ್ಭವಂ
ಸದ್ಯೋ ವಸ್ತುಬಲಪ್ರವರ್ತನಮರುದ್ವ್ಯಾಪಾರಸನ್ದೀಪಿತಃ ||
ನಿರ್ಲೇಪೇನ ಹಿ ದನ್ದಹೀತಿ ನ ಮನಾಗಪ್ಯಸ್ಯ ರೂಪಾನ್ತರಂ
ಸಂಸಾರಸ್ಯ ಶಿನಷ್ಟಿ ತೇನ ವಿದುಷಃ ಸದ್ಯೋವಿಮುಕ್ತಿರ್ಧ್ರುವಾ|| ೩೮||

(ಭಾವಾರ್ಥ :- ಸರಿಯಾದ ತಿಳಿವಳಿಕೆಯೆಂಬ ಬೆಂಕಿಯು ಪರಮಾರ್ಥವಸ್ತುವಿನ ಬಲವೆಂಬ ಪ್ರೇರಕವಾಯುವಿನಿಂದ ಹೊತ್ತಿಕೊಂಡು ಸಕಲಾಜ್ಞಾನವನ್ನೂ ಅದರ ಕಾರ್ಯವನ್ನೂ ಸುಟ್ಟುಹಾಕುವದೇ ಹೊರತು ಒಂದಿಷ್ಟಾದರೂ ಇವನಿಗೆ ಸಂಸಾರದ ರೂಪಾಂತರವನ್ನು ಉಳಿಸುವದಿಲ್ಲ. ಆದ್ದರಿಂದ ಜ್ಞಾನಿಗೆ ಸದ್ಯೋಮುಕ್ತಿಯಾಗುವದು ನಿಶ್ಚಯ.)

"ತತ್ತ್ವಜ್ಞಾನಿಗೆ ಕೂಡಲೆ ವಿದೇಹಕೈವಲ್ಯವಾಗುವದೆಂದೊಪ್ಪಿದರೆ 'ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯೇ' (ಎಲ್ಲಿಯವರೆಗೆ ಶರೀರವನ್ನು ಬಿಡುವದಿಲ್ಲವೋ ಅಲ್ಲಿಯವರೆಗೇ ತಡವು, ಆಮೇಲೆ ಸೇರಿಕೊಳ್ಳುತ್ತಾನೆ), 'ಪ್ರಜಹಾತಿ ಯದಾ ಕಾಮಾನ್ಸರ್ವಾನ್ ಪಾರ್ಥ ಮನೋಗತಾನ್ । ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ।' (ಯಾವಾಗ ಮನಸ್ಸಿನಲ್ಲಿರುವ ಸಕಲಕಾಮಗಳನ್ನೂ ಬಿಟ್ಟುಬಿಡುವನೋ, ತನ್ನಲ್ಲಿಯೇ ತನ್ನ ಆತ್ಮನಿಂದಲೇ ತುಷ್ಟನಾಗಿರುವನೋ ಆಗ ಸ್ಥಿತಪ್ರಜ್ಞನೆನಿಸುವನು)- ಇವೇ ಮುಂತಾದ ಜೀವನ್ಮುಕ್ತಿಯನ್ನು ಹೇಳುವ ಶಾಸ್ತ್ರಕ್ಕೆ ವಿಷಯವೇ ಇಲ್ಲದೆ ಹೋಗುವದಲ್ಲ !- ಎಂದರೆ ಆ ಶಾಸ್ತ್ರವು ಅರ್ಥವಾದವಾಗಿರುತ್ತದೆ. ಶುಕ, ವಾಮದೇವ- ಮೊದಲಾದವರು ಮುಕ್ತರಾದರೆಂಬ ಶಾಸ್ತ್ರದಂತೆ, ವಿವೇಕಿಯು ಕಲ್ಪಿಸುವ ಜೀವನ್ಮುಕ್ತಿಯನ್ನು ಅನುವಾದಮಾಡಿ ಬ್ರಹ್ಮವಿದ್ಯೆಯನ್ನು ಹೊಗಳುವದಕ್ಕೆ ಅದು ಬಂದಿರುತ್ತದೆ ; ಆದ್ದರಿಂದ ಆ ಶಾಸ್ತ್ರಕ್ಕೂ ನಮ್ಮ ಅಭಿಪ್ರಾಯಕ್ಕೂ ವಿರೋಧವಿಲ್ಲ- ಎಂಬ ಅಭಿಪ್ರಾಯದಿಂದ ಹೀಗೆ ಹೇಳುತ್ತಾರೆ :

ಜೀವನ್ಮುಕ್ತಿಪ್ರತ್ಯಯಂ ಶಾಸ್ತ್ರಜಾತಂ
ಜೀವನ್ಮುಕ್ತೇ ಕಲ್ಪಿತೇ ಯೋಜನೀಯಮ್ ॥
ತಾವನ್ಮಾತ್ರೇಣಾರ್ಥವತ್ತ್ವೋಪಪತ್ತೇಃ
ಸದ್ಯೋಮುಕ್ತಿಃ ಸಮ್ಯಗೇತಸ್ಯ ಹೇತೋಃ ॥ ೩೯ ॥

(ಭಾವಾರ್ಥ :- ಜೀವನ್ಮುಕ್ತಿಯನ್ನು ತಿಳಿಸುವ ಶಾಸ್ತ್ರವೆಲ್ಲವನ್ನೂ ಕಲ್ಪಿತಜೀವನ್ಮುಕ್ತನಿಗೆ ಹೊಂದಿಸಿಕೊಳ್ಳಬೇಕು ; ಅಷ್ಟರಿಂದಲೇ ಆ ಶಾಸ್ತ್ರವು ಸಾರ್ಥಕವಾಗುವದು. ಆದ್ದರಿಂದ ಸದ್ಯೋಮುಕ್ತಿವಾದವು ಸರಿಯೇ).

"ಜೀವನ್ಮುಕ್ತಿಶಾಸ್ತ್ರವು ಅರ್ಥವಾದವಾದರೂ ಅದು ಹೇಳುವ ವಿಷಯವು ಮತ್ತೆ ಯಾವ ಪ್ರಮಾಣಕ್ಕೂ ವಿರುದ್ಧವಾಗಿಲ್ಲವಾದ್ದರಿಂದ ಅದನ್ನು ಭೂತಾರ್ಥವಾದವೆನ್ನಬಹುದಾಗಿದೆ. ಆದಕಾರಣ ಹೀಗೆ ಸಿದ್ಧವಾಗುವ ಜೀವನ್ಮುಕ್ತಿಯನ್ನು ಇಲ್ಲವೆನ್ನುವದಕ್ಕೆ ಆಗಲಾರದು. ಜ್ಞಾನಬಲದಿಂದ ಅಜ್ಞಾನವು ಸಂಪೂರ್ಣವಾಗಿ ಹೋದಮೇಲೆ ಆ ಜೀವನ್ಮುಕ್ತಿಯಾಗುವದು ಹೊಂದುವದಿಲ್ಲವಲ್ಲ !- ಎನ್ನುವದು ಸರಿಯಲ್ಲ. 'ಅನಾರಬ್ಧಕಾರ್ಯೇ ಏವ ತು ತದವಧೇಃ' ಎಂಬ ಸೂತ್ರದಲ್ಲಿ ಹೇಳಿರುವ ರೀತಿಯಿಂದ ಜ್ಞಾನವು ಪ್ರಾರಬ್ಧಫಲವುಳ್ಳ ಪುಣ್ಯಪಾಪಗಳನ್ನು ಹೋಗಲಾಡಿಸಲಾರದಾದ್ದರಿಂದ ಅದು ಇರುವದಕ್ಕಾಗಿ ಕಲ್ಪಿಸಬೇಕಾಗಿರುವ ಅವಿದ್ಯಾಲೇಶವಶದಿಂದ ಜ್ಞಾನಿಯಾದವನೂ

ಪ್ರಾರಬ್ಧಕರ್ಮವು ಕ್ಷಯವಾಗುವವರೆಗೂ ಶರೀರವೇ ಮುಂತಾದದ್ದನ್ನು ಧರಿಸಿಕೊಂಡಿರ ಬಹುದಾಗಿದೆ - ಎಂದು ಈಗ ಮತ್ತೊಂದು ಮತವನ್ನು ಹೇಳುತ್ತಾರೆ:

ಯದ್ವಾ ವಿದ್ವದ್ಗೋಚರಂ ಯೋಜನೀಯಂ
ತಸ್ಯಾವಿದ್ಯಾಲೇಶವತ್ತ್ವೋಪಪತ್ತೇಃ ।
ತಸ್ಯಾಭೀಷ್ಟಾ ನಿರ್ನಿಮಿತ್ತಾ ನಿವೃತ್ತಿ-
ರ್ಯದ್ವಾ ವಿದ್ಯಾಸನ್ತತಿರ್ಹೇತುಲೇಶಮ್ ॥

(ಭಾವಾರ್ಥ :- ಅಥವಾ ಜ್ಞಾನಿಯೇ ಜೀವನ್ಮುಕ್ತನೆಂದು ಹೇಳಬಹುದು : ಏಕೆಂದರೆ ಅವನಲ್ಲಿ ಅವಿದ್ಯಾಲೇಶವಿರುವದೆಂಬುದು ಯುಕ್ತವಾಗಿರುತ್ತದೆ. ಆ ಲೇಶವು ಮತ್ತೆ ಯಾವ ನಿಮಿತ್ತವನ್ನೂ ಬಯಸದೆ ಕಾಲಕ್ರಮದಲ್ಲಿ ನಾಶವಾಗುತ್ತದೆ, ಅಥವಾ ಸಂತತವಾದ ವಿದ್ಯಾಭ್ಯಾಸದಿಂದಲೇ ನಾಶವಾಗುತ್ತದೆ.)

## ವಿಶ್ವೇಶ್ವರಟೀಕಾ

(೫೧, ೫೨ನೆಯ ಶ್ಲೋಕಕ್ಕೆ ವಿಶ್ವೇಶ್ವರನೆಂಬಾತನು
ಮಾಡಿರುವ ವ್ಯಾಖ್ಯಾನಭಾಗಗಳು.)

''ದೇಹವಿರುವಾಗಲೇ ವಿದೇಹಮುಕ್ತಿಯಾಗುವದು ಹೇಗೆ ? ಎಂದು ಶಂಕಿಸಬಾರದು. ಏಕೆಂದರೆ ಲೋಕದೃಷ್ಟಿಯಿಂದ ದೇಹವಿದ್ದರೂ ಅಜ್ಞಾನವನ್ನೆಲ್ಲ ಕಳೆದುಕೊಂಡಾತನಿಗೆ ಅಜ್ಞಾನಕಲ್ಪಿತವಾದ ದೇಹವಿರುವದಿಲ್ಲವಾದ್ದರಿಂದ ಮುಕ್ತಿಯೇ ಆಗುತ್ತದೆ. ಈ ವಿಷಯದಲ್ಲಿ 'ಅಶರೀರಂ ವಾವ ಸನ್ತಂ ನ ಪ್ರಿಯಾಪ್ರಿಯೇ ಸ್ಪೃಶತಃ' (ಶರೀರವಿಲ್ಲದವನಿಗೆ ಪ್ರಿಯಾಪ್ರಿಯಗಳ ಸೋಂಕಿರುವದಿಲ್ಲ) ಎಂಬ ಶ್ರುತಿಯುಂಟು. ಹಾಗಾದರೆ ಪ್ರವರ್ತಕವೇ ಇಲ್ಲದ್ದರಿಂದ ಶರೀರವು ಹೇಗೆ ಕರ್ಮದಲ್ಲಿ ತೊಡಗುವದು ? ಎಂದರೆ ಎಲ್ಲಿಯೋ ಯೋಚಿಸುತ್ತಿರುವವನ ಕೈ ಮುಂತಾದದ್ದು ತನ್ನತನ್ನ ಕೆಲಸದಲ್ಲಿ ತೊಡಗುವಂತೆ ವಾಸನಾಧೀನವಾಗಿ ಚಕ್ಷುರಾದೀಂದ್ರಿಯಗಳು ತಾವೇ ತೊಡಗುತ್ತವೆ. ಹೀಗೆಯೇ ಹಾದಿಯಲ್ಲಿರುವ ಹುಲ್ಲುಕಡ್ಡಿ ಮುಂತಾದದ್ದರಲ್ಲಿ ದಾರಿಹೋಕನ ಚಕ್ಷುರಾದಿಗಳು ಹೇಗೆ ಅನುರಾಗದಿಂದ ಬೀಳುವದಿಲ್ಲವೋ, ಮುಕ್ತದೇಹನಾದರೂ ಹಾಗೆಯೇ ಮೊದಲಿನಂತೆ ಭೋಜನಾದಿಗಳಲ್ಲಿ ತೊಡಗುತ್ತಾನೆ. ದಾರಿಯಲ್ಲಿ ನಡೆಯುವವನು ನಡುವೆ ಕಾಣುವ ಬೆಟ್ಟ, ನದಿ, ಕಾಡು- ಮುಂತಾದವುಗಳನ್ನು ಹೇಗೆ

ಕಾಣುವನೋ ಹಾಗೆಯೇ ಮುಕ್ತದೇಹನೂ ಭೋಜನಾದಿಗಳನ್ನು ಅನುಭವಿಸುತ್ತಾನೆ. ಆದ್ದರಿಂದ ಹಿಂದಿನ ಸಂಸ್ಕಾರದಿಂದ ಕುಂಬಾರನ ತಿಗುರಿಯಂತೆ ಋಷಭ, ಜಡಭರತನೇ ಮೊದಲಾದವರ ದೇಹದಂತೆ ಮೊದಲಿನಹಾಗೆಯೇ ಪ್ರವರ್ತಿಸುತ್ತಲೇ ಇರುವದು-ಎಂದು ತಿಳಿಯಬೇಕು. ಅವನಿಗೆ ಆಗ ಶರೀರವು ಬಿದ್ದುಹೋಗುವದೆಂಬುದು ಲೋಕದೃಷ್ಟಿಯಿಂದಲೇ ; ಇದಕ್ಕೆ 'ತದ್ಯಥಾಹಿನಿರ್ಲ್ವಯನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯೀತೈವಮೇವೇದಂ ಶರೀರಂ ಶೇತೇऽಥಾಯಮಶರೀರೋ ಮೃತಃ ಪ್ರಾಣೋ ಬ್ರಹ್ಮೈವ ತೇಜ ಏವ' (ಹೇಗೆ ಹಾವಿನಪೊರೆಯು ಹುತ್ತದಲ್ಲಿ ಬಿಟ್ಟದ್ದು ಒಣಗಿ ಬಿದ್ದಿರುತ್ತದೆಯೋ ಹಾಗೆಯೇ ಈ ಶರೀರವು ಬಿದ್ದಿರುತ್ತದೆ ; ಆದರೆ ಅವನು ಅಶರೀರನೇ, ಅಮೃತನೇ, ಪ್ರಾಣನೇ, ತೇಜವೇ) ಎಂಬ ಶ್ರುತಿಯು ಪ್ರಮಾಣವು.

''ಹೀಗೆ ಬ್ರಹ್ಮದ ಅಪರೋಕ್ಷಜ್ಞಾನವು ದೃಢವಾಗಿ ಅಜ್ಞಾನವೆಲ್ಲವನ್ನೂ ಕಳೆದುಕೊಂಡ ಪುರುಷನಿಗೆ ಅಜ್ಞಾನವೂ ಅದರ ಕಾರ್ಯವಾದ ಸರ್ವಕರ್ಮವೂ ವಾಸನಾಲೇಶದೊಂದಿಗೆ ನಾಶವಾಗುವದರಿಂದ ವಿದೇಹಮುಕ್ತಿಯಾಗುವದೆಂದು ಹೇಳಿದ್ದಾಯಿತು. ಇಂಥವನಿಗೂ ಲೋಕದೃಷ್ಟಿಯಿಂದ ದೇಹವಿರುವದೆಂಬ ಒಂದೇ ಕಾರಣದಿಂದ ಜೀವನ್ಮುಕ್ತಿಯನ್ನು ಅಂಗೀಕರಿಸಿದರೆ ಬ್ರಹ್ಮಾದಿಗಳಿಗೂ ಮತ್ತೊಬ್ಬರ ದೃಷ್ಟಿಯಿಂದ ದೇಹವಿರುವದರಿಂದ ಅವರೂ ಜೀವನ್ಮುಕ್ತರೇ ಎಂದಾಗುವದು ; ಆದರೆ ಅದು ಒಪ್ಪತಕ್ಕದ್ದಲ್ಲ, ಏಕೆಂದರೆ ಅವರೂ ಅಪರಿಚ್ಛಿನ್ನಬ್ರಹ್ಮಸ್ವರೂಪರೇ ಆಗಿರುವರೆಂದು ಪ್ರಸಿದ್ಧವಾಗಿರುತ್ತದೆ. ॥೫೧॥

''ಹೀಗೆ ವಿದೇಹಮುಕ್ತಿನಿಷ್ಠೆಯನ್ನು ಹೇಳಿದ್ದಾಯಿತು. ಈಗ ಬ್ರಹ್ಮಾಪರೋಕ್ಷಜ್ಞಾನಮಾತ್ರದಿಂದಲೇ ಮನುಷ್ಯನಿಗೆ ಅಜ್ಞಾನವೆಲ್ಲವೂ ಹೋಗಲಾರದಾದ್ದರಿಂದ ಬರಿಯ ಸಂಚಿತಕರ್ಮವು ಮಾತ್ರ ಹೋದರೆ ಜೀವನ್ಮುಕ್ತಿಯಾಗುವದೆಂದು ಹೇಳುತ್ತಿದ್ದಾರೆ.

ಪ್ರಾರಬ್ಧಕರ್ಮವೇಗೇನ ಜೀವನ್ಮುಕ್ತೋ ಯದಾ ಭವೇತ್ ।
ಕಂಚಿತ್ಕಾಲಮನಾರಬ್ಧಕರ್ಮಬನ್ಧಸ್ಯ ಸಂಕ್ಷಯೇ ॥೫೨॥

''...... ಇಲ್ಲಿ ಹೇಳಿರುವದರ ಅಭಿಪ್ರಾಯವೇನೆಂದರೆ : ಬ್ರಹ್ಮದ ಅಪರೋಕ್ಷಜ್ಞಾನದಿಂದ ಅನಾರಬ್ಧಕರ್ಮದ ಎಂದರೆ ಸಂಚಿತಕರ್ಮದ ಕ್ಷಯವು ಆದರೆ ಜೀವನ್ಮುಕ್ತನಾಗುವನು ; ಮತ್ತೂ ಶಮಾದಿಸಾಧನಗಳನ್ನು ಮಾಡುತ್ತಾ ವೇದಾಂತಶ್ರವಣಮನನನಿದಿಧ್ಯಾಸನಗಳನ್ನು ಮತ್ತೆಮತ್ತೆ ಅಭ್ಯಾಸಮಾಡುತ್ತಿದ್ದರೆ ಜ್ಞಾನವು ದೃಢವಾಗಿ ಅಜ್ಞಾನವೆಲ್ಲವೂ ಹೋಗಿಬಿಡುವದು. ಪ್ರಾರಬ್ಧಕರ್ಮವಾಸನಾಲೇಶಾನುವೃತ್ತಿಗಳೂ ಹೋಗಿ ದೇಹಾದಿಗಳಲ್ಲಿ ಅಭಿಮಾನವೇ ಇಲ್ಲದಿರುವದರಿಂದ ಅವನು ವಿದೇಹಮುಕ್ತನಾಗುತ್ತಾನೆ. ॥೫೨॥

**ವಿಚಾರ :** ಮೇಲಿನ ವ್ಯಾಖ್ಯಾನದಲ್ಲಿ ಜೀವನ್ಮುಕ್ತಿ, ವಿದೇಹ ಮುಕ್ತಿ-ಎರಡೂ ಬದುಕಿರುವಾಗಲೇ ಆಗುವವೆಂಬ ಅರ್ಥವು ತೋರುತ್ತದೆ. ''ಜ್ಞಾನವು ದೃಢವಾಗದೆ ಹೋದರೆ ಪ್ರಾರಬ್ಧಕರ್ಮವಾಸನೆಗಳು ತೊಲಗುವದಿಲ್ಲವಾದ್ದರಿಂದ ದೇಹವು ಬಿದ್ದುಹೋಗುವವರೆಗೂ ಜೀವನ್ಮುಕ್ತನಾಗಿಯೇ ಇರುತ್ತಾನೆ'' ಎಂಬ ಮುಂದಿನ ವಾಕ್ಯದಿಂದಲೂ ಇದೇ ಅಭಿಪ್ರಾಯವು ಹೊರಡುತ್ತದೆ. ಆದರೆ **ಸಂಕ್ಷೇಪಶಾರೀರಕ**ದಲ್ಲಿ ಸದ್ಯೋಮುಕ್ತಿಯೆಂದರೆ ದೇಹವು ಬಿದ್ದುಹೋದಮೇಲೆಯೇ ಆಗುವದೆಂದು ಹೇಳಿರುತ್ತದೆ ಯೆಂಬುದು ಸ್ಪಷ್ಟವಾಗಿರುತ್ತದೆ. ಆ ಸದ್ಯೋಮುಕ್ತಿವಾದದಲ್ಲಿ ಜೀವನ್ಮುಕ್ತಿಗೆ ಅವಕಾಶವೇ ಇರುವದಿಲ್ಲ. ಜೀವನ್ಮುಕ್ತಿವಾದದಲ್ಲಿ ಕೆಲವು ಕಾಲದ ಮೇಲೆಯೇ ಜ್ಞಾನಿಯ ದೇಹವು ಬಿದ್ದುಹೋಗಿ ವಿದೇಹಮುಕ್ತಿಯಾಗುವ ದೆಂಬರ್ಥವನ್ನು ''ತಸ್ಮಾಜ್ಜೀವನ್ಮುಕ್ತರೂಪೇಣ ವಿದ್ವಾನಾರಬ್ಧಾನಾಂ ಕರ್ಮಣಾಂ ಯೋಗಸಿದ್ಧ್ಯೈ ! ಸ್ಥಿತ್ವಾ ಭೋಗಂ ಧ್ವಾನ್ತಗನ್ಧಪ್ರಸೂತಂ ಭುಕ್ತ್ವಾತ್ಯನ್ತಂ ಯಾತಿ ಕೈವಲ್ಯಮನ್ತೇ ॥'' (ಆದ್ದರಿಂದ ಜ್ಞಾನಿಯು ಜೀವನ್ಮುಕ್ತರೂಪದಿಂದ ಇದ್ದು ಅವಿದ್ಯಾವಾಸನೆಯಿಂದುಂಟಾದ ಪ್ರಾರಬ್ಧ ಕರ್ಮಗಳ ಫಲವನ್ನು ಅನುಭವಿಸಿದ ಬಳಿಕ ಕೊನೆಯಲ್ಲಿ ಆತ್ಯಂತಿಕ ಮೋಕ್ಷವನ್ನು ಪಡೆಯುತ್ತಾನೆ) ಎಂಬ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ.

ವ್ಯಾಖ್ಯಾನಕಾರರ ಮತವೂ ಸಂಕ್ಷೇಪಶಾರೀರಕಕಾರರ ಮತವೂ ಆಚಾರ್ಯರ ಮತಕ್ಕೆ ವಿರುದ್ಧವಾಗಿವೆಯೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಜ್ಞಾನವಾದ ಕೂಡಲೆ ಅಜ್ಞಾನವು ಹೋಗಿ ಮುಕ್ತನಾಗಿಬಿಡುತ್ತಾನೆಂದೂ ಇದೇ **ಸದ್ಯೋಮುಕ್ತಿ**ಯೆಂದೂ ಆಚಾರ್ಯರು ಸ್ಪಷ್ಟವಾಗಿ ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಬರೆದಿರುತ್ತಾರೆ. ಈ ಮುಕ್ತಿಯನ್ನು ಪಡೆದು ಕೊಂಡಿರುವವನನ್ನೇ 'ಸ್ಥಿತಪ್ರಜ್ಞ', 'ಯುಕ್ತ', 'ಭಕ್ತ', 'ಗುಣಾತೀತ'-ಎಂದು ಭಗವದ್ಗೀತೆಯಲ್ಲಿ ವರ್ಣಿಸಿರುವದು. ದೇಹಪಾತವಾದ ಮೇಲೆ ಜ್ಞಾನಿಗೆ ಮಿಕ್ಕವರಂತೆ ಜನ್ಮಾಂತರವಾಗುವದಿಲ್ಲವಾದ್ದರಿಂದ ಅವನು ಬ್ರಹ್ಮವನ್ನೇ ಸೇರುತ್ತಾನೆಂದು ವಿದೇಹಕೈವಲ್ಯವನ್ನೂ ಶ್ರುತಿಗಳಲ್ಲಿ ಗೌಣವಾಗಿ ಹೇಳಿರುತ್ತದೆಯೆಂದೂ ಭಾಷ್ಯಕಾರರು ಸ್ಪಷ್ಟವಾಗಿ ತಿಳಿಸಿರುತ್ತಾರೆ.

# ಶಬ್ದಾನುಕ್ರಮಣಿಕೆ

ಸೂಚನೆ :- ಇಲ್ಲಿ ★ ಹೀಗೆ ನಕ್ಷತ್ರಚಿಹ್ನೆಯಿಂದ ಗುರುತುಮಾಡಿರುವ ಶಬ್ದಗಳು ಪ್ರಸ್ಥಾನತ್ರಯಭಾಷ್ಯದಲ್ಲಿ ಕಂಡುಬರುವದಿಲ್ಲವಾದರೂ ಈಚಿನ ವೇದಾಂತಗ್ರಂಥಗಳಲ್ಲಿ ಬಹುವಾಗಿ ಪ್ರಯುಕ್ತವಾಗಿರುತ್ತವೆ. ಗ್ರಂಥದ ಶೈಲಿಯಿಂದ ಕರ್ತೃವನ್ನು ಊಹಿಸಬೇಕೆನ್ನುವ ಶೋಧಕರಿಗೆ ಈ ಶಬ್ದಗಳ ಪಟ್ಟಿಯು ಪ್ರಯೋಜನಕರವಾಗಿರುವದು. ಶಬ್ದಗಳ ಮುಂದಿರುವ ಸಂಖ್ಯೆಯು ಗ್រಂಥದ ಶ್ಲೋಕಸಂಖ್ಯೆಯನ್ನು ತಿಳಿಸುತ್ತದೆ.

## ವಾಕ್ಯವೃತ್ತಿ

★ **ಅಖಣ್ಡೈಕರಸ ೩೮** - ಯಾವದೊಂದು ಬಗೆಯ ಭೇದವನ್ನೂ ಒಪ್ಪದ ಒಂದೇ ಬಗೆಯ ತತ್ತ್ವ.

**ಅತದ್ವ್ಯಾವೃತ್ತಿ ೨೮** - ಅದಲ್ಲದ್ದನ್ನು ಬೇರ್ಪಡಿಸುವದು.

**ಅನಾರಬ್ಧಕರ್ಮ ೫೨** - ಪ್ರಾರಬ್ಧಕರ್ಮವಲ್ಲದ ಕರ್ಮ, ಸಂಚಿತ ಮತ್ತು ಆಗಾಮಿ.

**ಅಸ್ಮತ್ಪ್ರತ್ಯಯಶಬ್ದ ೪೪** - ನಾನು ಎಂಬ ಅರಿವು ಮತ್ತು ಶಬ್ದ.

**ಆಲಂಬನ ೪೪** - ವಿಷಯ.

**ಕೈವಲ್ಯ ೫೩** - ತಾನೊಬ್ಬನೇ ಉಳಿಯುವ ಮುಕ್ತಿ.

★ **ಚೈತನ್ಯವಿಗ್ರಹ ೧೧** - ಬರಿಯರಿವಿನ ಸ್ವರೂಪವಾದ.

**ಜಡ ೨೦** - ಅರಿವಿಲ್ಲದ ವಸ್ತು.

★ **ಜೀವನ್ಮುಕ್ತ ೫೨** - ಬದುಕಿರುವಾಗಲೇ ಜ್ಞಾನವನ್ನು ಪಡೆದು ಮುಕ್ತನಾಗಿರುವವನು, ಇವನಿಗೆ ಒಂದಿಷ್ಟು ಅಜ್ಞಾನವು ಉಳಿದುಕೊಂಡಿರುವದೆಂದೂ ಶರೀರವು ಬಿದ್ದುಹೋದ ಮೇಲೆ ಆಗುವ ವಿದೇಹಮುಕ್ತಿಯೇ ಪೂರ್ಣಮುಕ್ತಿಯೆಂದೂ ಈಗಿನ ಕೆಲವರು ವೇದಾಂತಿಗಳ ನಂಬಿಕೆ.

**ತಾಪತ್ರಯ ೩** - ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂಬ ಮೂರು ಬಗೆಯ ತಾಪಗಳು.

**ನಿಯನ್ತೃ ೩೫** - ಜೀವರ ಒಳಹೊಕ್ಕು ಅವರನ್ನು ಆಳುತ್ತಿರುವ ಪರಮಾತ್ಮ.

**ಪಾರೋಕ್ಷ್ಯ ೪೧, ೪೫** - ಪ್ರತ್ಯಕ್ಷವಲ್ಲದೆ ದೇಶಕಾಲಗಳಿಂದ ಮರೆಯಾಗಿರುವದು.

**ಪಿಣ್ಡ ೧೪** - ಸ್ಥೂಲಶರೀರ.

★ **ಪೂರ್ಣಾನನ್ದ ೪೧** - ವಿಷಯಸುಖಕ್ಕಿಂತ ಬೇರೆಯಾಗಿರುವ ಆನಂದ, ಬ್ರಹ್ಮಸ್ವರೂಪ.

★ **ಪ್ರಜ್ಞಾನವಿಗ್ರಹ ೩೦** - ಚೈತನ್ಯಸ್ವರೂಪ. ಚೈತನ್ಯವಿಗ್ರಹ ವೆಂಬ ಶಬ್ದವನ್ನು ನೋಡಿ.

★ **ಪ್ರತ್ಯಗ್ಬೋಧ ೩೯** - ನಮ್ಮೊಳಗಿನ ಚೈತನ್ಯ.

**ಪ್ರಾರಬ್ಧಕರ್ಮ ೫೨** - ಫಲವನ್ನು ಕೊಡುವದಕ್ಕೆ ಮೊದಲುಮಾಡಿರುವ ಕರ್ಮ. ಈ ಶರೀರಕ್ಕೆ ಕಾರಣವಾಗಿರುವ ಕರ್ಮ ; ಇದರ ಬಲದಿಂದಲೇ ಜ್ಞಾನಿಯು ಜೀವನ್ಮುಕ್ತನಾಗಿರುವನೆಂದು ಕೆಲವರು ಈಚಿನ ವೇದಾಂತಿಗಳು ಹೇಳುವರು.

★ **ಬೋಧವಿಗ್ರಹ ೨೩** - ಚೈತನ್ಯವಿಗ್ರಹ ಎಂಬ ಶಬ್ದವನ್ನು ನೋಡಿ.

★ **ಭಾಗಲಕ್ಷಣಾ ೪೮** - ಇದನ್ನು 'ಭಾಗತ್ಯಾಗಲಕ್ಷಣೆ'ಯೆಂದೂ ಕರೆಯುತ್ತಾರೆ ; ಎರಡು ವಸ್ತುಗಳಿಗೆ ಐಕ್ಯವನ್ನು ಹೇಳುವಾಗ ವಿರುದ್ಧವಾದಷ್ಟು ವಾಚ್ಯಾರ್ಥವನ್ನು ಬಿಟ್ಟುಬಿಡುವ ಲಕ್ಷಣೆ.

**ಭೂತಸೂಕ್ಷ್ಮ ೫೧** - ಭೂತಗಳ ಸೂಕ್ಷ್ಮರೂಪ ; ಇವುಗಳಿಂದಾಗಿರುವ ಸೂಕ್ಷ್ಮಶರೀರವು ಮುಕ್ತಿಯಾಗುವವರೆಗೂ ಹೋಗುವದಿಲ್ಲ.

★ **ಮಾಯೋಪಾಧಿ ೪೫** - ಈಶ್ವರನಿಗೆ ಮಾಯೆಯೇ ಉಪಾಧಿಯೆಂದೂ ಜೀವನಿಗೆ ಅವಿದ್ಯೆಯು ಉಪಾಧಿಯೆಂದೂ ಹೇಳುವದು ಈಗಿನ ವೇದಾಂತಿಗಳಲ್ಲಿ ಹೆಚ್ಚು ರೂಢಿಯಾಗಿದೆ.

**ಲಕ್ಷಣಾ ೪೭** - ಯಾವದಾದರೊಂದು ಪ್ರಮಾಣಕ್ಕೆ ವಿರೋಧವಾಗಿರುವಾಗ ವಾಚ್ಯಾರ್ಥಕ್ಕೆ ಸಂಬಂಧಪಟ್ಟಂತೆ ತೋರುವ ಅರ್ಥ.

**ವಿಕಾರ ೧೯** - ಮಾರ್ಪಾಡು

**ವಿಶಿಷ್ಟ ೩೮** - ವಿಶೇಷಣ ವಿಶೇಷ್ಯಭಾವದಿಂದ ತೋರುವ ವಾಕ್ಯಾರ್ಥ.

★ **ವಿಶೀರ್ಣಕಾರ್ಯಕರಣ ೫೧** - ಶರೀರೇಂದ್ರಿಯಗಳು ನಾಶವಾಗುವದು ; ಜೀವನ್ಮುಕ್ತನಿಗೆ ವಿದೇಹಮುಕ್ತಿಯಾಗಬೇಕಾದರೆ ಅವನ ಶರೀರೇಂದ್ರಿಯಗಳು ಹೋಗಬೇಕೆಂದು ಈಚಿನ ಕೆಲವರು ವೇದಾಂತಿಗಳ ನಂಬಿಕೆ.

**ವೃತ್ತಿ ೨೧** - ಮನಸ್ಸಿನಿಂದ ಅರಿಯುವಾಗ ಅದರಲ್ಲಿ ಆಗುವ ಮಾರ್ಪಾಡು.

**ವೈಷ್ಣವಪದ ೫೩** - ಪರಮಾತ್ಮನ ಸ್ಥಾನ, ಮುಕ್ತಿ.

★ **ಶಬಲ ೪೩, ೪೫** - ವಿಶೇಷಣದಿಂದೊಡಗೂಡಿದ.

**ಶಮಾದಿ ೩, ೪೯** - ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನ.

**ಶ್ರುತ್ಯಾಚಾರ್ಯಪ್ರಸಾದ ೫೦** - ಶ್ರುತಿಯಿಂದಲೂ ಗುರುಗಳಿಂದಲೂ ಮನಸ್ಸಿನಲ್ಲಿ ಆಗುವ ಸಂಸ್ಕಾರ.

**ಷಡ್ಭಾವವಿಕಾರ ೨೭** - ಹುಟ್ಟುವದು, ಇರುವದು, ಮಾರ್ಪಡುವದು, ಬೆಳೆಯುವದು, ಸೊರಗುವದು, ಹಾಳಾಗುವದು- ಎಂಬ ಆರು ವಸ್ತುವಿಕಾರಗಳು.

★ **ಸಂಸರ್ಗ ೩೮** - ಒಂದು ಪದದ ಅರ್ಥದ ಸಂಬಂಧವು ಮತ್ತೊಂದು ಅರ್ಥದಲ್ಲಿ ತೋರುವಂತೆ ಆಗುವ ವಾಕ್ಯಾರ್ಥ.

**ಸಙ್ಘಾತ ೧೭** - ದೇಹೇಂದ್ರಿಯಗಳ ಗುಂಪು.

★ **ಸತ್ತಾಸ್ವಲಕ್ಷಣ ೩೦** - ಬರಿಯ ಇರವಿನ ರೂಪ, ಬ್ರಹ್ಮಸ್ವರೂಪ.

**ಹೇತುಕರ್ತೃತ್ವ ೩೬** - ಮತ್ತೊಬ್ಬರಿಂದ ಮಾಡಿಸುವ ಕರ್ತೃತ್ವ.

# ಲಘುವಾಕ್ಯವೃತ್ತಿ

★ **ಅಜ್ಞಾನ ೨** - ತಿಳಿಯದಿರುವದು, ತಪ್ಪುತಿಳಿವಳಿಕೆಯೆಂಬ ಅರ್ಥದಲ್ಲೇ ಅಲ್ಲದೆ ಇದನ್ನು ಭಾವರೂಪವಾದ ಅನಿರ್ವಚನೀಯವಾದ ಒಂದು ಶಕ್ತಿಯೆಂದೂ ತಿಳಿಯುವದು ಈಚಿನ ವೇದಾಂತಿಗಳ ರೂಢಿ.

**ಕರ್ಮೇಂದ್ರಿಯ ೧** - ಕೆಲಸವನ್ನು ಮಾಡುವದಕ್ಕೆ ಉಪಯೋಗಿಸುವ ವಾಕ್ಪಾಣಿ ಪಾದಪಾಯೂಪಸ್ಥವೆಂಬ ಇಂದ್ರಿಯಗಳು.

★ **ಕಾರಣದೇಹ ೨** - ಸ್ಥೂಲ ಸೂಕ್ಷ್ಮಶರೀರಗಳಿಗೆ ಕಾರಣವಾಗಿರುವ ಅಜ್ಞಾನವೆಂಬ ಕಾರಣದೇಹವನ್ನು ಪ್ರಸ್ಥಾನತ್ರಯಭಾಷ್ಯದಲ್ಲಿ ಪ್ರಚುರವಾಗಿ ಹಿಡಿದಿರುವದು ಕಂಡುಬರುವದಿಲ್ಲ.

★ **ಚಿದಾಭಾಸ ೫** - ಚೈತನ್ಯದಂತೆ ತೋರುವ ಜೀವರೂಪ.

★ **ಜಾಡ್ಯ ೪** - ಜ್ಞಾನ.

**ಜ್ಞಾನೇಂದ್ರಿಯ ೧** - ಅರಿಯುವದಕ್ಕೆ ಉಪಯೋಗಿಸುವ ಶ್ರೋತ್ರ, ತ್ವಕ್ಕು ಚಕ್ಷುಸ್ಸು, ಜಿಹ್ವಾ ಘ್ರಾಣ- ಎಂಬ ಇಂದ್ರಿಯಗಳು.

★ **ತೂಷ್ಣೀಂಭಾವ ೫** - ಎಚ್ಚರದಲ್ಲಿ ಏನನ್ನೂ ಅರಿಯದೆ ಸುಮ್ಮನಿರುವ ಅವಸ್ಥೆ.

★ **ನಿರ್ವಿಕಲ್ಪಕ ೧೩, ೧೪** - ಇದು, ಅದು ಎಂದು ಅರಿಯುವ ಅರಿವಲ್ಲದ ಬ್ರಹ್ಮಚೈತನ್ಯ

★ **ಬೋಧಾಭಾಸ ೨** - ಚಿದಾಭಾಸ ಎಂಬ ಶಬ್ದವನ್ನು ನೋಡಿ.

★ **ಬ್ರಹ್ಮಾಭ್ಯಾಸ ೧೭**- ಬ್ರಹ್ಮವನ್ನೇ ಚಿಂತಿಸುವದು, ಅದರ ವಿಷಯದಲ್ಲಿ ಹೇಳುವದು ಕೇಳುವದು- ಈ ಬಗೆಯ ಅಭ್ಯಾಸ.

★ **ವಾಕ್ಯವೃತ್ತಿ ೧೬** - ವಾಕ್ಯದ ವ್ಯಾಪಾರ.

**ವಾಸನಾ ೧**- ಅನುಭವವಾದ ಮೇಲೆ ಮನಸ್ಸಿನಲ್ಲಿ ಉಳಿಯುವ ಸಂಸ್ಕಾರ.

★ **ಶುದ್ಧಬೋಧ ೩** - ಶುದ್ಧ ಚೈತನ್ಯ.

★ **ಸಮಾಧಿ ೧೫** - ವೃತ್ತಿಗಳನ್ನೆಲ್ಲ ತೊಲಗಿಸಿಕೊಂಡು ಹೊರಗನ್ನು ಮರೆಯುವದು.

★ **ಸವಿಕಲ್ಪಕ ೧೩, ೧೪** - ಇದು, ಅದು- ಎಂದು ಅರಿಯುವ ವೃತ್ತಿ ಪ್ರಕಾರಗಳಿಂದೊಡಗೂಡಿದ.

**ಸಾಕ್ಷೀ ೨** - ದೇಹೇಂದ್ರಿಯ ಪ್ರಾಣಮನಸ್ಸುಗಳನ್ನೂ ಚಿದಾಭಾಸನನ್ನೂ ಬೆಳಗುವ ಚಿದ್ರೂಪ.

**ಸೂಕ್ಷ್ಮದೇಹ ೧** - ಮನಸ್ಸು, ಅಂತಃಕರಣ, ಪ್ರಾಣ, ಇಂದ್ರಿಯಗಳು- ಇವುಗಳಿಂದಾಗಿರುವ ದೇಹವೆಂದು ಈ ಗ್ರಂಥದಲ್ಲಿ ವರ್ಣಿಸಿದೆ.

**ಸ್ಥೂಲ ದೇಹ ೧** - ಇಂದ್ರಿಯ ಗೋಚರವಾಗಿರುವ ಹೊರಗಿನ ದೇಹ.

# ಕೆಲವು ಪ್ರಕರಣ ಗ್ರಂಥಗಳು

1. **ಪ್ರಕರಣಗಳು - ಸಂಪುಟ -1 : ಉಪದೇಶಸಾಹಸ್ರಿ.** ಇದು ಪದ್ಯಭಾಗವೆಂದು, ಗದ್ಯಭಾಗವೆಂದು ಎರಡು ಭಾಗಗಳಾಗಿವೆ.

**ಪದ್ಯಭಾಗ (ಮೊದಲನೆಯ ಮುದ್ರಣ - 1995 : ಪು. ಡೆಮ್ಮಿ 16 + 528)**

**ಗದ್ಯಭಾಗ (ನಾಲ್ಕನೆಯ ಮುದ್ರಣ -2000: ಪು. ಡೆಮ್ಮಿ 12 + 180)**

2. **ಪ್ರಕರಣಗಳು - ಸಂಪುಟ -2** : ಇದರಲ್ಲಿ ಸ್ವಾತ್ಮನಿರೂಪಣ, ಮನೀಷಾ ಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ -ಎಂಬ ಆರು ಪ್ರಕರಣಗಳು ಅರ್ಥಸಮೇತ ಇವೆ.

**(ಮೊದಲನೆಯ ಮುದ್ರಣ - 1957 : ಪು. ಡೆಮ್ಮಿ 26 + 110)**

3. **ವಿವೇಕಚೂಡಾಮಣಿ - ಸಂಪುಟ - 3** : ಶ್ರೀಶಂಕರಾಚಾರ್ಯರ ಪ್ರಕರಣ ಗ್ರಂಥಗಳಲ್ಲಿ ಜನಪ್ರಿಯವಾಗಿರುವ ಈ ಗ್ರಂಥವು ಮೂಲ-ಕನ್ನಡ ಅನುವಾದಗಳೊಡನೆ ಸಿದ್ಧವಾಗಿದೆ. **(ಮೂರನೆಯ ಮುದ್ರಣ - 1993 : ಪು. ಡೆಮ್ಮಿ 18 + 220)**

4. **ಪ್ರಕರಣಗಳು - ಸಂಪುಟ - 4** : ಇದರಲ್ಲಿ ಜೀವನ್ಮುಕ್ತಾನಂದಲಹರಿ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀ ಮಾಲೆ, ಅನಾತ್ಮಶ್ರೀವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ, ಮಹಾವಾಕ್ಯದರ್ಪಣ - ಎಂಬ ಹನ್ನೊಂದು ಪ್ರಕರಣಗಳಿವೆ.

**(ಮೊದಲನೆಯ ಮುದ್ರಣ - 1962 : ಪು. ಡೆಮ್ಮಿ 16 + 170)**

5. **ಪ್ರಕರಣಗಳು - ಸಂಪುಟ -5** : ಇದರಲ್ಲಿ **ಸರ್ವವೇದಾಂತಸಿದ್ಧಾಂತ ಸಾರಸಂಗ್ರಹವೆಂಬ** ಶ್ರೀಶಂಕರಾಚಾರ್ಯರ ಕೃತಿಯ ಕನ್ನಡ ಅನುವಾದ ಸಮೇತ ಇದೆ. **(ಮೊದಲನೆಯ ಮುದ್ರಣ - 1969 : ಪು. ಡೆಮ್ಮಿ 12 + 238)**

6. **ಪ್ರಕರಣಗಳು - ಸಂಪುಟ -6 ವಿಷ್ಣುಸಹಸ್ರನಾಮಸ್ತೋತ್ರಭಾಷ್ಯ** : ಶ್ರೀಶಂಕರಾಚಾರ್ಯ ವಿರಚಿತ ಭಾಷ್ಯಸಮೇತ ವಿಷ್ಣು ಸಹಸ್ರನಾಮವು ಕನ್ನಡ ಅನುವಾದಸಹಿತ ಇದರಲ್ಲಿದೆ. **(ಮೂರನೆಯಮುದ್ರಣ-2000: ಪು. ಡೆಮ್ಮಿ 10 + 292)**

7. **ಪ್ರಕರಣಗಳು - ಸಂಪುಟ 7- ಸನತ್ಸುಜಾತೀಯಭಾಷ್ಯ** : ಮಹಾಭಾರತಾಂತರ್ಗತಸನತ್ಸುಜಾತೀಯತತ್ತ್ವೋಪದೇಶಗಳು. ಭಾಷ್ಯ - ಕನ್ನಡ ಅನುವಾದ ಸಹಿತ ಇದರಲ್ಲಿದೆ.

**(ಮೊದಲನೆಯ ಮುದ್ರಣ - 1976 : ಪು. ಡೆಮ್ಮಿ 14 + 240)**

8. **ಪ್ರಕರಣಗಳು - ಸಂಪುಟ -8** : ಪ್ರಬೋಧಸುಧಾಕರ, ಪ್ರಶ್ನೋತ್ತರರತ್ನ ಮಾಲಿಕಾ, ಶ್ರೀರಾಮಭುಜಂಗಪ್ರಯಾತಸ್ತೋತ್ರ, ದತ್ತಲಹರೀ ಎಂಬ ವಿಷಯಗಳಿವೆ. **(ಎರಡನೆಯ ಮುದ್ರಣ - 1999 : ಪು. ಡೆಮ್ಮಿ 8 + 104)**

# ಸಂಸ್ಥಾಪಕರ ಸ್ಮರಣೆ

ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು, ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು **ವೈ. ಸುಬ್ಬರಾವ್** ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು ''ಸುಬ್ರಾಯ'' ರೆಂದೇ ಪ್ರಖ್ಯಾತರಾಗಿದ್ದರು. 10. 6. 1948ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶಕಾರ್ಯಾಲಯವು** ದೇಶ ವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880- 1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**

**''ಓಂ ನಮೋ ಭಗವತೇ ಸಚ್ಚಿದಾನಂದಾಯ''**